ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ Chilume Circulated in and around 10 countries ಸಂಚಿಕೆ ೩, ಆಗಸ್ಟ್ 2013

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಿಡ್ನಿಯಲ್ಲಿ ಬಚ್ಚನ್ ಚಿತ್ರ - ವರದಿ ... ಪು. ೧
ಸಂಪಾದಕೀಯ ... ಪು. ೨
ತವರಿನ ಸುದ್ದಿ ... ಪು. ೬

ಚಿಲುಮೆಯ ಒಳಗೆ

ಮಾಸ್ಟರ್ ಹಿರಣ್ಣಯ್ಯ ಲೇಖನ ... ಪು. ೩
ಆರೋಗ್ಯ ... ಪು. ೪

ಚಿಲುಮೆಯ ಒಳಗೆ

ತಾತನ ತಾಪತ್ರಯ (ಹಾಸ್ಯ) ... ಪು. ೫
ರೀ ರೆಸಿಪಿ ಕೊಡ್ತೀರಾ! ... ಪು. ೬
ಕಥಾ ಚಿಲುಮೆ ... ಪು. ೭

ಚಿಲುಮೆಯ ಒಳಗೆ

ಕಾವ್ಯ, ಹಾಸ್ಯ ... ಪು. ೮
ಹಬ್ಬ ಹರಿದಿನ – ಲೇಖನ ... ಪು. ೯
ಪದ ಪುಂಜ ... ಪು. ೧೦

ಚಿಲುಮೆಯ ಒಳಗೆ

ಛಾಯಾ ಚಿಲುಮೆ ... ಪು. ೧೧
ನಾ ಓದಿದ ಪುಸ್ತಕ ... ಪು. ೧೨

ಚಿಲುಮೆಯ ಒಳಗೆ

ಕನ್ನಡದ ಅರಿವು ... ಪು. ೧೩
ವಿಜ್ಞಾನ ತತ್ವ ... ಪು. ೧೪
ಅಲ್ಲಲ್ಲಿ ಏನೇನು ... ಪು. ೧೪

ಈಗಿನ ಸುದ್ದಿ

ಆಸ್ಟ್ರೇಲಿಯಾದಲ್ಲಿ ಡಿಶುಂ ಡಿಶುಂ ಎಂದು ಜಯಭೇರಿ ಬಾರಿಸಿದ "ಬಚ್ಚನ್"

ಸಿನಿಮಾ ಎಂದರೆ ಯಾರಿಗೆ ಇಷ್ಟ ಇಲ್ಲ? ಎಲ್ಲ ತಮ್ಮ ಬಾಲ್ಯ ಹಾಗು ಹರೆಯದ ದಿನಗಳನ್ನು ನೆನೆಸಿಕೊಂಡರೆ ಒಂದಲ್ಲ ಒಂದು ಸಿನಿಮದ ಮಜಾ ಅನುಭವಿಸಿದ್ದು ಕಣ್ಮುಂದೆ ಬರುತ್ತದೆ. ಆದರೆ ಕರ್ನಾಟಕದಿಂದ ಬಹಳ ದೂರ, ಈ ಕಾಂಗರು ನಾಡಿನ ಸಿಡ್ನಿಯಲ್ಲಿ ಅದೂ ಮುಖ್ಯವಾಹಿನಿಯ ಬೆಳ್ಳಿಪರದೆಯ ಮೇಲೆ ನಾವು ಒಂದು ಕನ್ನಡ ಸಿನಿಮ ನೋಡುತ್ತೇವೆ ಎಂದು ಬಹಳ ಜನರಲ್ಲಿ ತುಂಬಾ ಕಾತುರ ಇತ್ತು.

ಸಾಮಾನ್ಯವಾಗಿ ಇತರೆ ಚಿಕ್ಕ ಮಂದಿರಗಳಲ್ಲಿ ಅಪರೂಪಕ್ಕೆ ತೆರೆ ಕಾಣುತ್ತಿದ್ದ ಕನ್ನಡ ಚಿತ್ರಗಳಿಗೆ ಹೊರತಾಗಿ ಇತ್ತೀಚೆಗಷ್ಟೇ ಏಪ್ರಿಲ್ ತಿಂಗಳಲ್ಲಿ ಸ್ಯಾಂಡಲ್ ವುಡ್ ನಲ್ಲಿ ತೆರೆಕಂಡು ೫೦ ದಿನ ಭರ್ಜರಿ ಪ್ರದರ್ಶನ ಮೀರಿ ಮುನ್ನುಗ್ಗುತ್ತಿರುವ ಕಿಚ್ಚ ಸುದೀಪ್ ಅಭಿನಯದ ಹಾಗು ಮೊಗ್ಗಿನ ಮನಸು, ಕೃಷ್ಣನ್ ಲವ್ ಸ್ಟೋರಿ ಖ್ಯಾತಿಯ ಶಶಾಂಕ್ ನಿರ್ದೇಶನದ ಪಕ್ಕಾ ಕಮರ್ಷಿಯಲ್ ಚಿತ್ರ ಬಚ್ಚನ್.

ಸಿಡ್ನಿಯ ಲಿವರ್ಪೂಲ್ ನ ಇವೆಂಟ್ ಸಿನಿಮಾಸ್ ನಲ್ಲಿ ೨೦ ಜುಲೈ ೨೦೧೩ ರಂದು ಮಧ್ಯಾಹ್ನ ೩ ಘಂಟೆಗೆ, ಬೆಳ್ಳಿ ಪರದೆಯ ಮೇಲೆ ಚಿತ್ರ ನೋಡುವ ತವಕ ಹೊರಗೆ ನಿಂತ ಎಲ್ಲ ಕನ್ನಡಿಗರಲ್ಲೂ ಎದ್ದು ಕಾಣುತ್ತಿತ್ತು. ಹಲವಾರು ಜನ ತಮ್ಮ ಶಾಲಾ ಕಾಲೇಜ್ ದಿನಗಳನ್ನು ನೆನೆಸಿಕೊಂಡು ಸೀಟ್ ನಂಬರ್ ಹುಡುಕಿ ತಮಗೆ ಬೇಕಾದವರನ್ನು ಪಕ್ಕದಲ್ಲಿ ಕೂಡಿಸಿಕೊಳ್ಳಲು ಹಾತೊರೆಯುತ್ತಿದ್ದರು. ಅಂತು ಇಂತು ನೋಡ ನೋಡುತ್ತ ಮಂದಿರ ಭರ್ತಿ!

ಸಕ್ಕತ್ ಆಕ್ಷನ್ ನೊಂದಿಗೆ ಸಿನಿಮಾದ ಆರಂಭ. ಸಿನಿಮಾ ಉದ್ದಕ್ಕೂ ಬುಲೆಟ್ ಪ್ರಕಾಶರ ಕಾಮಿಡಿ ನಗು ತರಿಸುವಲ್ಲಿ ಸಫಲವಾಯ್ತು. ಶಶಾಂಕ್ ರ ಮೊನಚಾದ ನಿರೂಪಣೆ ಕಥೆಗೆ ಸಾಕಷ್ಟು ತಿರುವುಗಳನ್ನು ಕೊಟ್ಟು ಸುದೀಪ್ ರ angry young man ಪಾತ್ರ ಅಗ್ನಿಪತ್ ಸಿನೆಮಾದ ಅಮಿತಾಬ್ ಬಚ್ಚನ್ ನೆನಪಿಸುತ್ತಿತ್ತು. ಗಣಿಗಾರಿಕೆಯ ದುಷ್ಪರಿಣಾಮವನ್ನು ಸಮಾಜಕ್ಕೆ ತೋರಿಸುವ ಪ್ರಯತ್ನವೂ ಸಾಕಷ್ಟು ಪರಿಣಾಮಕಾರಿಯಾಗಿ ಮೂಡಿ ಬಂದಿತ್ತು. ಚಿತ್ರದ ನಾಯಕಿಯರಾದ ಪರುಲ್ ಯಾದವ್ , ಭಾವನ ಹಾಗು ಟುಲಿಪ್ ಜೋಷಿ ಕೂಡ ಚಿತ್ರ ರಸಿಕರಿಗೆ ಮುದನೀಡಿದರು. ಹರಿಕೃಷ್ಣರ ಸಂಗೀತ ಚಿತ್ರಕ್ಕೆ ಕಮರ್ಷಿಯಲ್ ಹಾಗು ಮಾಧುರ್ಯದ ಲೇಪನ ನೀಡಿತ್ತು. ಚಿತ್ರ ಮುಗಿದು ಹೊರಗೆ ಬರುತ್ತಿದ್ದ ಪ್ರೇಕ್ಷಕರಿಗಂತು ದೊಡ್ಡ ಪರದೆಯ ಮೇಲೆ ನೂರಾರು ಕನ್ನಡಿಗರೊಂದಿಗೆ ಕನ್ನಡ ಚಿತ್ರ ನೋಡಿದ ಸಂತೋಷ ಎದ್ದು ಕಾಣುತ್ತಿತ್ತು. ಎಲ್ಲರೂ ಹೀಗೆ ಮತ್ತೊಂದು ಕನ್ನಡ ಚಿತ್ರ ನೋಡುವ ತಮ್ಮ ಅಭಿಪ್ರಾಯ ಹಂಚಿಕೊಳ್ಳಲು ಹಾತೊರೆಯುತ್ತಿದ್ದರು. ಕನ್ನಡ ನಾಡಿನಿಂದ ದೂರವಿದ್ದರೂ ಕನ್ನಡದ ನೆಲದಲ್ಲೇ ಕನ್ನಡ ಚಿತ್ರ ನೋಡಿದಷ್ಟು ಸಂತೋಷ ಅನುಭವಿಸಿದರು ಅಲ್ಲಿ ಸೇರಿದ್ದ ನಮ್ಮ ಜನ. ಹೀಗೆ ಸಾಕಷ್ಟು ಕನ್ನಡ ಚಿತ್ರಗಳು ಕನ್ನಡದ ನೆಲ ದಾಟಿ ಬರಲಿ, ಉಳಿಯಲಿ , ಬೆಳೆಯಲಿ, ಕನ್ನಡ ಕಂಪನ್ನು ಬೀರಲಿ ಎಂಬ ಆಶಯ ಎಲ್ಲರ ಮನದಲ್ಲಿತ್ತು.

ಸಿಡ್ನಿ ಅಲ್ಲದೆ, ಮೆಲ್ಬೋರ್ನ್ ಮತ್ತು ಅಡಿಲೇಡ್ ನಗರಗಳಲ್ಲೂ ತುಂಬಿದ ಪ್ರದರ್ಶನವಾದ ವರದಿ ಬಂದಿದೆ. ನಮ್ಮ ಭಾಷೆ, ಕಲೆಯನ್ನು ನಾವೇ ಬೆಳೆಸಬೇಕು ಮತ್ತು ಬೆಳೆಸುವವರನ್ನು ಪ್ರೋತ್ಸಾಹಿಸಬೇಕು ಅಲ್ಲವೇ.▪

ವರದಿ ಮತ್ತು ಚಿತ್ರಗಳು: ನಾಗೇಂದ್ರ ಅನಂತಮೂರ್ತಿ



ವೀಕ್ಷಿಸಿ

ಸುಗಮ ಕನ್ನಡ ಕೂಟ
ಪಿ.ಬಿ.ಎಸ್
ಶ್ರದ್ಧಾಂಜಲಿಯ
ಹಾಡುಗಳು

ಆನಂದಿಸಿ

ನಮ್ಮವರೇ ಆದ ಕುಮಾರಿ ನಿರೀಕ್ಷಾ ಭಟ್ ಪಿ.ಬಿ.ಎಸ್ ಶ್ರದ್ಧಾಂಜಲಿ ಯಲ್ಲಿ ಹಾಡಿದ ಗೀತೆ ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ನಮ್ಮವರೇ ಆದ ಶ್ರೀನಿವಾಸ್ ಗೋಪಿನಾಥ್ ಪಿ.ಬಿ.ಎಸ್ ಶ್ರದ್ಧಾಂಜಲಿ ಯಲ್ಲಿ ಹಾಡಿದ ಗೀತೆ ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಆಗಸ್ಟ್ ಎಂದ ಕೂಡಲೇ ನಮ್ಮ ಕಣ್ಣುಗಳು ೧೫ನೆ ತಾರೀಖಿಗೆಡೆಗೆ ಹೋಗುತ್ತವೆ. ಭಾರತ ಬ್ರಿಟಿಷ್ ಆಡಳಿತದಿಂದ ಮುಕ್ತಿ ಹೊಂದಿದ ದಿನ. ಸ್ವತಂತ್ರ ರಾಷ್ಟ್ರವಾದ ದಿನ. ನಾವು ಅಷ್ಟು ಹೆಮ್ಮೆಯಿಂದ ಹೇಳುವ ಈ ಸ್ವಾತಂತ್ರ್ಯ ಎಲ್ಲರೂ ಇಷ್ಟಪಡುವ ಶಬ್ದ. ಹಾಗಾದರೆ ಸ್ವಾತಂತ್ರ್ಯ ಅಂದರೆ ನಮಗೆ ಅನಿಸಿದ್ದು, ಯಾರೂ ಪ್ರಶ್ನಿಸದೆ ಮಾಡುವ ಒಂದು ಸ್ಥಿತಿಯೇ? ನಿಜ ನೀವು ನಿಘಂಟುವಿನಲ್ಲಿ ಹುಡುಕಿದರೆ ಅದರ ಅರ್ಥ ಯಾರ ಅಧೀನಕ್ಕೂ ಒಳಪಡದ, ನಿರ್ಬಂಧವಿಲ್ಲದ ಎಂಬ ಅರ್ಥ ಸಿಗುವುದು.

ಮಾನವ ಸಮಾಜ ಜೀವಿ. ಅಂದಮೇಲೆ ಅವಲಂಬನೆ ನಿಶ್ಚಿತ. ಎಲ್ಲಾ ನಾನೇ ಮಾಡಿಕೊಂಡು ಹೋಗುತ್ತೇನೆ, ಯಾರ ಹಂಗೂ ಬೇಡ ಅನ್ನೋ ಮನಸ್ಥಿತಿ ಇದ್ದಾಗ ನಾವು ಸಮಾಜದಲ್ಲಿ ಭಾಗವಹಿಸಲು ಅವಕಾಶ ಸಿಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಎಲ್ಲವನ್ನು ಸಹಿಸಿಕೊಂಡು ಹೋಗಿ, ಧ್ವನಿ ಎತ್ತಬೇಡಿ ಎಂದೇನು ನಾನು ಹೇಳುತ್ತಿಲ್ಲ. ಎಲ್ಲರ ಒಳಿತೇ ನಮ್ಮ ಜೀವನದ ಉದ್ದೇಶವಾಗಿರಬೇಕಾದಾಗ ನಾವು ಮಾತ್ರ ಹೇಗೆ ಬೇಕೋ ಹಾಗೆ ಇದ್ದು ಇತರರನ್ನು ತುಳಿತಕ್ಕೊಳಪಡಿಸುವುದು ಅಥವಾ ನಿರ್ಲಕ್ಷಿಸುವುದು ಸ್ವಾತಂತ್ರ್ಯದ ಲಕ್ಷಣವಲ್ಲ ಎಂದಷ್ಟೇ ನನ್ನ ಇಂಗಿತ. ಹಾಗಾದಾಗ ಬ್ರಿಟಿಷರು ತಾವು ಭಾರತವನ್ನು ಲೂಟಿ ಮಾಡುತ್ತಿದ್ದುದ್ದಕ್ಕೂ ನಮಗೂ ಏನು ವ್ಯತ್ಯಾಸ ಹೇಳಿ. ಅವರು ಪರಕೀಯರು ಎನಿಸಿಕೊಂಡು ನಮ್ಮ ದೇಶವನ್ನು ಸಾರಿಸಿ ಹೋದರು. ನಾವುಗಳು ಸುಮ್ಮನೆ ದೇಶಾಭಿಮಾನದ ಮಾತುಗಳನ್ನು ಆಡುತ್ತ ದೇಶವನ್ನು ಮತ್ತಷ್ಟು ಅಧೋಗತಿಗೆ ತಳ್ಳುತ್ತಿದ್ದೀವಿ ಅಷ್ಟೇ. ನಮಗೆ ನಮ್ಮ ಭಾಷೆ, ಸಂಸ್ಕೃತಿ ಬೇಡವಾಗುತ್ತಿದೆ, ನಮ್ಮ ಜನರ ಬಗ್ಗೆ ನಮಗೇ ಕೀಳರಿಮೆ ಬರುತ್ತಿದೆ, ಸೆಕ್ಯುಲರ್ ಹೆಸರಿನಲ್ಲಿ ಸುಮ್ಮಸುಮ್ಮನೆ ದೂಷಣೆ ಅಥವಾ ಮತಾಂಧತೆಯ ಇನ್ನೊಂದು ಪರಮಾವಧಿ. ಹೀಗಿದ್ದಾಗ ಅದು ಸ್ವತಂತ್ರ ಹೇಗಾಗುತ್ತದೆ? ಕೇವಲ ನಾವು ಮುಂದೆ ಬಂದು ಬಿಡೋಣ, ಬೇರೆಯವರ ಕಷ್ಟ ಸುಖ ನಮಗೇಕೇ. "ಪರ ಚಿಂತೆ ನಿನಗೆ ಏಕಯ್ಯ" ಎಂದು ಶರಣರು ಹೇಳಿಲ್ಲವೇ ಎಂದೆಲ್ಲಾ ವಾದಮಂಡಿಸುವ ಪರಿ ಹೆಚ್ಚಾಗುತ್ತಿದೆ. ಅದರ ಬದಲು "ನಾವೂ ಬದುಕೋಣ ಇತರರಿಗೂ ಬದುಕಲು ಬಿಡೋಣ" ಎನ್ನುವ ಮನೋಭಾವ ಒಂದು ಸ್ವತಂತ್ರ ಸಾಮ್ರಾಜ್ಯದ ಒಂದು ಲಕ್ಷಣ, ಅದು ಈಗ ಇಲ್ಲವಾಗುತ್ತಿದೆ. ನೀವು ಗಮನಿಸಿರಬಹುದು, "ಚೆಲುಮೆ" ಯ ಜೂನ್ ಸಂಚಿಕೆಯ ಹಿರಿನುಡಿಯಲ್ಲಿ ಈ ವಾಕ್ಯವಿತ್ತು "ಜೀವನದಲ್ಲಿ ನೀನೊಬ್ಬನೇ ಏನಾದರೂ ಸಾಧಿಸಿ ಮೇಲೆ ಬರುವುದಕ್ಕಿಂತ ಹತ್ತು ಜನರನ್ನು ಮೇಲೆ ತಂದರೆ ಅದಕ್ಕಿಂತ ದೊಡ್ಡ ಸಾಧನೆ ಬೇರೊಂದಿಲ್ಲ". ಅದರಂತೆ ನಾವುಗಳು ಮಾತ್ರ ಮೇಲೆ ಬರುವುದಕ್ಕಿಂತ ನಮ್ಮ ಸುತ್ತ ಮುತ್ತ ಅವಶ್ಯಕತೆ ಇರುವ ಜನರಿಗೆ ಸಹಾಯ ಮಾಡುತ್ತಾ ನಮ್ಮ ಜೀವನ ಸಾಗಿಸೋಣ ಅಲ್ಲವೇ. ಅದುವೇ ನಿಜವಾದ ಸ್ವತಂತ್ರ ದಿನದ ಆಚರಣೆ ಅಲ್ಲವೇ?

ಕರ್ನಾಟಕದ ವೈಶಿಷ್ಟ್ಯಗಳು

ಬ್ರಿಟಿಷರ ವಿರುದ್ಧ ಧ್ವನಿ ಎತ್ತಿದ ಮೊದಲ ಮಹಿಳೆ ಕಿತ್ತೂರು ಚೆನ್ನಮ್ಮ (೧೮೨೪ರಲ್ಲಿ - ಕಪ್ಪ ತೆರಿಗೆ ವಿರುದ್ಧ). ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಹೋರಾಡಿದ್ದು ೧೮೫೭ರಲ್ಲಿ

ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ (KKGSS) ಹುಬ್ಬಳ್ಳಿಯ ಬೆಂಗೇರಿಯಲ್ಲಿದೆ. ಇದು ಭಾರತದ ಧ್ವಜ ತಯಾರಿಸಿ ಸರಬರಾಜು ಮಾಡಲು ಇರುವ ಏಕೈಕ ಘಟಕವಾಗಿದೆ. ಇದನ್ನು 1957 ರಲ್ಲಿ ಸ್ಥಾಪಿಸಲಾಯಿತು.



ಪುರಂದರ ದಾಸರು ಕರ್ನಾಟಕ ಸಂಗೀತದ ಪಿತಾಮಹ ಎಂಬುದು ಎಲ್ಲರೂ ಅರಿತಿರುವ ವಿಷಯ. ಹಿಂದೂಸ್ತಾನಿ ಸಂಗೀತದ ಮೇಲೂ ಇವರ ಪ್ರಭಾವವಿದೆ ಎಂದು ಹೇಳುತ್ತಾರೆ. ತಾನ್ಸೇನ್ ರ ಗುರು ಹರಿದಾಸರು ಪುರಂದರ ದಾಸರ ಶಿಷ್ಯರು.

ತವರಿನ ಸುದ್ದಿ

ಕರ್ನಾಟಕ ಮತ್ತು ಭಾರತ ದೇಶದ ಮುಖ್ಯಾಂಶಗಳು - ಜುಲೈ ೨೦೧೩

- ✓ ಭರಪೂರ ಮಳೆಯಿಂದ ಬಹುತೇಕ ಅಣೆಕಟ್ಟುಗಳು ಭರ್ತಿ. ಸಿದ್ದರಾಮಯ್ಯನವರಿಂದ ಸಾಂಪ್ರದಾಯಿಕ ಬಾಗಿನ ಅರ್ಪಣೆ
- ✓ ಗಯಾದ ಬುದ್ಧ ದೇವಾಲಯದಲ್ಲಿ ಸ್ಫೋಟ. ಇಂಡಿಯನ್ ಮುಜಾಹಿದೀನ್ ಕೈವಾಡದ ಶಂಕೆ
- ✓ ಕೋಲಾರದ ಚಿನ್ನದ ಗಣಿ ಪುನರಾರಂಭಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ.
- ✓ ಬೆಂಗಳೂರಿನ ನಾಡ ಪ್ರಭುವಿಗೆ ಸಂದ ಗೌರವ. ವಿಮಾನ ನಿಲ್ದಾಣವೀಗ "ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ"
- ✓ ಆದಿಚುಂಚನಗಿರಿ ಮಠಕ್ಕೆ ಐ.ಟಿ ಧಾಳಿ
- ✓ ಬಿ ಎಸ್ ಯಡ್ಯೂರಪ್ಪ ಮರಳಿ ಬಿ.ಜೆ.ಪಿ ಗೆ ಬರುವ ಸಾಧ್ಯತೆ. ಹಲವು ಕಡೆ ಇಂಗಿತ ತೋರಿಕೊಂಡ ಮಾಜಿ ಮುಖ್ಯ ಮಂತ್ರಿ
- ✓ ಹೋಳಾದ ಆಂಧ್ರ ಪ್ರದೇಶ. ಬಹು ದಿನದ ತೆಲಂಗಾಣ ರಾಜ್ಯಕ್ಕೆ ಕೇಂದ್ರ ಸಮ್ಮತಿ

ಮಾಸ್ಟರ್ ಮಾತು

ಮಾಸ್ಟರ್ ಹಿರಣ್ಣಯ್ಯ

ಲಂಬಾವತಾರ ಖ್ಯಾತಿಯ ಹಿರಿಯ ರಂಗಭೂಮಿ ಕಲಾವಿದರು

ಬೆಂಗಳೂರು ಅಂದು-ಇಂದು

ಬೆಳೆಯುವ ಪರಿಪಾಠ ಜೀವಿಗಳಿಗಷ್ಟೇ ಸೀಮಿತವಾದದ್ದು ಎಂಬುದು ಶ್ರೀಸಾಮಾನ್ಯನ ದೃಷ್ಟಿಯಲ್ಲಿ ಇರಬಹುದು. ಆದರೆ ಸ್ಥಾವರ ರೂಪಿಯಾದ ಪಟ್ಟಣಗಳಿಗೂ ಅದು ಅನ್ವಯಿಸುತ್ತೆ, ಅಲ್ಲದೆ ಜೀವಿಗಳಿಗಿಂತಾ ಹೆಚ್ಚು ವೇಗವಾಗಿ ಬೆಳೆಯಬಹುದು ಎಂಬ ಸತ್ಯ ತಿಳಿಯ ಬೇಕಾದರೆ ಬೆಂಗಳೂರನ್ನೇ ಬಂದು ನೋಡಬೇಕು. ಹೇಗೆ ಮನುಷ್ಯನ ಬೆಳೆಯುವಿಕೆಯನ್ನು, ದೈಹಿಕ-ಮಾನಸಿಕ (ಬೌದ್ಧಿಕ) ಎಂದು ವಿಂಗಡಿಸಬಹುದೋ, ಹಾಗೆಯೇ ಬೆಂಗಳೂರಿನ ಬೆಳವಣಿಗೆಯನ್ನೂ ನಾನಾ ಪ್ರಾಕಾರಗಳಲ್ಲಿ ವಿಂಗಡಿಸಿ ನೋಡಬಹುದು. ಸ್ಥೂಲವಾಗಿ ವಿಂಗಡಿಸ ಬಹುದೆಂದರೆ, ಸಾಮಾಜಿಕ (ನಗರ), ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ...
ಇತ್ಯಾದಿ ಇತ್ಯಾದಿಗಳು.

ನಾನು ಪ್ರಪ್ರಥಮವಾಗಿ ಬೆಂಗಳೂರಿಗೆ ಬಂದಿದ್ದು, 1942 ರಲ್ಲಿ. ಆಗಿನ್ನೂ ನನಗೆ 8 ವರ್ಷ. ಅಂದಿನಿಂದ ಇಂದಿನವರೆಗೆ-ಅಂದರೆ 60ಕ್ಕೂ ಹೆಚ್ಚು ವಸಂತಗಳ ಬೆಂಗಳೂರು ಬೆಳವಣಿಗೆಯನ್ನು ನೋಡುತ್ತಲೇ ಬರುತ್ತಿದ್ದೇನೆ-ಬೆಳೆದಿದ್ದೇನೆ. ಅದೆಲ್ಲವನ್ನೂ ವಿವರವಾಗಿ ದಾಖಲಿಸ ಬೇಕೆಂದರೆ ಅದೊಂದು ಬೃಹತ್ ಗ್ರಂಥವೇ ಆದೀತು. ಪ್ರಕೃತ ಅತ್ಯಂತ ಸಂಕ್ಷಿಪ್ತವಾದ ಪಕ್ಷಿನೋಟವೊಂದನ್ನು ಇಲ್ಲಿ ದಾಖಲಿಸಲು ಯತ್ನಿಸಿದ್ದೇನೆ. ಅಂದರೆ ಇದು ಕೇವಲ ನನ್ನ ದೃಷ್ಟಿ-ಅಭಿರುಚಿ-ಅನುಭವೋಕ್ತಿಗಳೇ ವಿನಃ ಅನ್ಯಥಾ ಅಲ್ಲ.

ಸಾಮಾಜಿಕವಾಗಿ-ನಗರ ಹಾಗೂ ನರಮಾನವರ, ವಿಶಾಲ-ವೈವಿಧ್ಯಮಯ ಬದಲಾವಣೆಗಳನ್ನು ಗಮನಿಸಿದರೆ, ಬಹುಶಃ ವೇಗದಲ್ಲಿ-ವ್ಯಾಪ್ತಿಯಲ್ಲಿ-ಬದುಕು-ಭಾಷೆಗಳಲ್ಲಿ ನಮ್ಮೂರು ಮತ್ಯಾವುದೇ ನಗರಕ್ಕಿಂತಾ ಹಿಂದೆ ಬಿದ್ದಿಲ್ಲಾ, ಬದಲಾಗಿ ಬಹುಪಾಲು ಮುಂದೆ ಹೋಗಿದೆ ಎಂಬುದು ಸರ್ವರ ಗಮನಕ್ಕೂ ಬಂದಿದೆ. ಬಹುಶಃ ನಗರದ ಬಡಾವಣೆಗಳಿಗೆ ಇಡಲು ಹೆಸರುಗಳೇ ಮುಗಿದು ಹೋಗಿ, ಇನ್ನೇನಿದ್ದರೂ ಸಂಖ್ಯೆಗಳನ್ನು ಇಟ್ಟು ಕರೆಯುವ ಸ್ಥಿತಿ ಬಂದಿದೆ ಅಂದರೆ, ಬೆಳವಣಿಗೆಯನ್ನು ನೀವೇ ಊಹಿಸಿ. ಹತ್ತು ಬಾರಿ ಹೋಗಿ ಬಂದಿದ್ದರೂ, ಕತ್ತಲಾದ ಮೇಲೆ ಮತ್ತೊಮ್ಮೆ ಅದೇ ಮನೆಗೆ ಹೋಗಲು ದುಸ್ಸಾಧ್ಯವೆನ್ನುವ ವೇಗದಲ್ಲಿ ಬೆಳೆಯುತ್ತಿದೆ.

ಉದ್ದಗಲಗಳನ್ನು ಮುಟ್ಟಿ-ಮೀರಿ-ಮುಗಿಸಿ ಈಗ ಗಗನದತ್ತ ಮೈಚಾಚಿತ್ತಿರುವ ಕಾಂಕ್ರೀಟ್ ಕಟ್ಟಡಗಳು ಮೈನವಿರೇಳುಸುತ್ತಿದೆ. ಹಿಂದೊಮ್ಮೆ ಇದ್ದ 3-4 ಲಕ್ಷ ಜನ ಸಂಖ್ಯೆ ಇಂದು 60-70 ಲಕ್ಷ ದಾಟಿದ್ದರೂ, ಊರು-ನೀರು-ದಾರಿ-ದೀಪಗಳು ಆ ಸಾಂದ್ರತೆ-ಗಾತ್ರಗಳಲ್ಲಿ ಬೆಳೆಯದೇ ಇರುವುದು ವಿಪರ್ಯಾಸವೇ ಸರಿ. ಈಗಿನ ಎಸ್.ಬಿ.ಎಂ. ಕೇಂದ್ರ ಕಟ್ಟಡದ ಚೌಕದಲ್ಲಿನ ಎರಡು ದೇವಸ್ಥಾನಗಳೇ ಅಂದು ಕೆಂಪೇಗೌಡ ರಸ್ತೆಯ ಕೊನೆಯಾಗಿದ್ದು, ನಮ್ಮಪ್ಪ ನನಗೆ ಅಲ್ಲಿಂದಾಚೆಗೆ ಸಂಜೆ 7 ರ ಮೇಲೆ ಹೋಗಬಾರದೆಂದು ಕಟ್ಟಪ್ಪಣೆ ಮಾಡಿದ್ದರು. ಇನ್ನು ಅವಿನ್ಯೂ ರಸ್ತೆಯಲ್ಲಿಯಲ್ಲಿನ 80% ಅಂಗಡಿಗಳಿಗೆ ತಾರಸಿಗೆ ಬದಲಾಗಿ ಕರೀ ಕಲ್ಲು ಚಪ್ಪಡಿಗಳನ್ನು ಹಾಸಿ, ಮಳೆಗಾಲದಲ್ಲಿ ಅದರ ಮೇಲೆ ಹುಲ್ಲು ಬೆಳೆದಿದ್ದು ಒಂದು ಬಗೆಯ ಗ್ರಾಮಾಂತರದ ಪೇಟೆ ಬೀದಿಯನ್ನು ನೆನಪಿಸುತ್ತಿತ್ತು. ಅಂದಿನ ವಾಹನ ಚಾಲಕರಿಗೆ ಇಂದಿನ ಪರಿಸ್ಥಿತಿ ಹುಚ್ಚು ಹಿಡಿಸಿದರೆ ಆಶ್ಚರ್ಯ ಪಡಬೇಕಿಲ್ಲ. ಶಬ್ದ ರಹಿತ, ಶುದ್ದ ಗಾಳಿಯನ್ನು ಇಂದು ಹುಡಿಕಿ ಹೋಗಬೇಕಾಗಿದೆ. ಅಂದು ಇಡೀ ಊರೇ ಹಾಗಿತ್ತು.

ನಾನು ಮೊಟ್ಟ ಮೊದಲಿಗೆ ಸಂಸಾರ ಹೂಡಿದ್ದು 1963 ರರಲ್ಲಿ. ತಾತಾ ಸಿಲ್ಕ್ ಫಾರಂನಲ್ಲಿ ಮನೆಯೊಂದನ್ನು (30x50 ಯಲ್ಲಿ ಕಟ್ಟಿದ್ದ 2 ಬೆಡ್ರೂಂನ 12 ಚದುರದ್ದು) 23 ಸಾವಿರಕ್ಕೆ ಕೊಂಡು, ಅಲ್ಲಿ 12 ವರ್ಷವಿದ್ದೆ. ಇಂದಿನ ಗರಡಿ ಅಪಾರ್ಟ್‌ಮೆಂಟ್ಸ್ ಮತ್ತು ಸುತ್ತಲಿನ ಜಾಗವೆಲ್ಲಾ ಬಟಾಬಯಲಾಗಿತ್ತು. ಪ್ರತಿ ದಸರಾದ ಆಯುಧ ಪೂಜೆಯ ದಿನ ಅಲ್ಲಿ ನಾನು, ನನ್ನ ಮಿತ್ರ, ದಿ|ರಾಮದಾಸ್ನಾಯಕ್, ಮತ್ತು ದಿ| ಚಾಮರಾಜುಗಳು (ಇಂದಿನ ಬಹುದೊಡ್ಡ ಉದ್ಯಮಿ-ಕಂಟ್ರಾಕ್ಟರ್ ಕುಟುಂಬ) ನಮ್ಮ ಕಾರುಗಳನ್ನು ಮತ್ತು ಒಂದೆರಡು ಲಾರಿಗಳನ್ನು ನಿಲ್ಲಿಸಿ ಪೂಜಿಸುತ್ತಿದ್ದುದು, ಪ್ರತಿ ಶುಕ್ರವಾರ-ಮಂಗಳವಾರಗಳಂದು ಬಡಾವಣೆಯ ಎಲ್ಲಾ ಮುತ್ತೈದೆಯರೂ ಸಾಲುಸಾಲಾಗಿ ಮನೆ,ಮನೆಗಳಲ್ಲಿನ ಶ್ರೀಲಲಿತಾಸಹಸ್ರನಾಮ, ಲಕ್ಷ್ಮೀಪೂಜೆ, ವ್ರತಾದಿಗಳಿಗೆ ಹೋಗಿ, ಕೈಯಲ್ಲಿ ಕುಂಕುಮ-ಕೋಸಂಬರಿ-ಕಾಯಿ ಪಡೆದು ನಗುನಗುತ್ತಾ ನಡೆದಾಡುತ್ತಿದ್ದುದು, ಅದೇ ಬಯಲಿನಲ್ಲಿ ನಾವೆಲ್ಲಾ ಶ್ರೀಗೌರೀ-ಗಣಪತಿಯರನ್ನು ಕೂರಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದುದು, ಬದುಕಿನ ಸಾರ್ಥಕತೆಗೆ-ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ.....ಎಂಬ ಶಾಂತಿ ಮಂತ್ರಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಆ ಮಾನಸಿಕ ನೆಮ್ಮದಿ, ಐಕ್ಯತೆ, ನಿರಾಡಂಬರ ಸಹ ಬಾಳ್ವೆ, ಪ್ರತಿಫಲಾಪೇಕ್ಷೆ ರಹಿತವಾದ ಮೈತ್ರಿ, ಇವೆಲ್ಲಾ ಇಂದೆಷ್ಟು ಕೃತಕತೆಗೆ ಮಾರ್ಪಟ್ಟು, ಯಾಂತ್ರಿಕವಾಗಿ ಹೋಗಿದೆ? ಇಂದಿನ ಇಲ್ಲಿಯ ಬದುಕು `ಯಾರಿಗಾಗಿಯೋ ಆಡುವ ನಾಟಕವಾಗಿದೆಯೇನೋ ಅನ್ನಿಸುತ್ತದೆ. "ಮನೆಗಳು ಬೆಳೆದೆತ್ತರಕ್ಕೋ, ಹರಡಿದ ವೈಶಾಲ್ಯತೆಗೋ, ತುಂಬಿರುವ ನವನಾಗರೀಕತೆಯ ಆಡಂಬರಕ್ಕೋ", ಸರಿಸಾಟಿಯಾಗಿ "ಮನಗಳು" ಬೆಳೆಯದೇ ಹೋಗಿರುವುದನ್ನು ಗುರುತಿಸಿದಾಗ, "ಈಗಲೇ ಹೀಗೆ ಇನ್ನು ಮುಂದಿನ ನಮ್ಮ ಸಂತತಿಗಳ ಕಾಲಕ್ಕೆ ಹೇಗೋ" ಅನ್ನುವುದನ್ನು ನೆನೆದಾಗ, ನಮ್ಮ ಹಿರಿಯರು ಕೊಟ್ಟಿದ್ದ-ಬಿಟ್ಟಿದ್ದ ಸ್ವರ್ಗವನ್ನು ಉಂಡ ನಾವು, ನಾಳೆಯ ಮಕ್ಕಳಿಗೆ ಬಿಡುತ್ತಿರುವುದು ಏನನ್ನು-ಎಂಬುದನ್ನು ಚಿಂತಿಸದಿರುವುದೇ ಲೇಸೇನೋ? ▪

ಟೌನ್ ಹಾಲ್

ಅವೆನ್ಯೂ ರಸ್ತೆ

ಮೆಟ್ರೋ

ಎಂ. ಜಿ. ರೋಡ್

ಬ್ರಿಗೇಡ್ ರಸ್ತೆ

ಬಿ ಎಂ ಐ ಸಿ ಮೇಲ್ಸೇತುವೆ

ಡಯಾಬಿಟಿಸ್ – ಪ್ರಶ್ನೋತ್ತರ

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಡಯಾಬಿಟಿಸ್ ಸಿಹಿಗೆ ಸಂಬಂಧಪಟ್ಟ ಖಾಯಿಲೆ ನಿಜ. ಹಾಗೆಂದು ಜೀವನಕ್ಕೆ ಸಿಹಿಯೇನಲ್ಲ. ಸಾಮಾನ್ಯವಾಗಿ ಡಯಾಬಿಟಿಸ್ ಇರುವವರಿಗೆ ಚೆನ್ನಾಗಿ ವ್ಯಾಯಾಮ ಮಾಡಿ ಎನ್ನುತ್ತಾರೆ. ಅದು ಎಷ್ಟು ಮತ್ತು ಯಾವುದು ಉತ್ತಮ ಎಂಬ ಮಾಹಿತಿ ಈ ಸರಳ ಪ್ರಶ್ನೋತ್ತರದಿಂದ ತಿಳಿಯಪಡಿಸುವ ಒಂದು ಪ್ರಯತ್ನ.

ಪ್ರಶ್ನೆ ೧. ಡಯಾಬಿಟಿಸ್ ಇರುವವರು ಒಂದು ವಾರಕ್ಕೆ ಕನಿಷ್ಟ ಎಷ್ಟು ನಿಮಿಷಗಳು ವ್ಯಾಯಾಮ ಮಾಡಬೇಕು?

1. 400 ನಿಮಿಷಗಳು
2. 300 ನಿಮಿಷಗಳು
3. 200 ನಿಮಿಷಗಳು
4. 100 ನಿಮಿಷಗಳು

ಉತ್ತರ: ವ್ಯಾಯಾಮವು ಎಲ್ಲರಿಗೂ ಆರೋಗ್ಯಕರ, ಮಧುಮೇಹಿಗಳಿಗೆ ಬಹು ಮುಖ್ಯ. ಅದು ರಕ್ತದಲ್ಲಿನ ಸಕ್ಕರೆ ಪ್ರಮಾಣ, ರಕ್ತದೊತ್ತಡ ಕಡಿಮೆ ಮಾಡುವುದಲ್ಲದೆ, ಇನ್ಸುಲಿನ್ ಪ್ರಾಭಾವ ಹೆಚ್ಚಿಸುತ್ತದೆ. ಹೃದಯದ ಆರೋಗ್ಯವನ್ನೂ ಉತ್ತಮಪಡಿಸುತ್ತದೆ. ಅದು ಔಷಧಿಯ ಪ್ರಾಮಾಣವನ್ನೂ ಕಡಿಮೆ ಮಾಡಿಕೊಳ್ಳಲು ಸಹಾಯಕಾರಿ. ಆರೋಗ್ಯ ತಜ್ಞರ ಪ್ರಕಾರ ಅತಿ ಕಡಿಮೆ ಅಂದರೆ ವಾರಕ್ಕೆ ೨೦೦ ನಿಮಿಷವಾದರೂ ವ್ಯಾಯಾಮ ಅತ್ಯಗತ್ಯ. ಅವು ಟೆನ್ನಿಸ್, ಕಾಲ್ನಡಿಗೆ, ಬೈಕಿಂಗ್ ಇತರೆ ಯಾವುದೇ ಇರಬಹುದು.

ಪ್ರಶ್ನೆ ೨. ಡಯಾಬಿಟಿಸ್ ಇರುವವರಿಗೆ Strength training ಏಕೆ ಬಹು ಮುಖ್ಯ?

1. ಅದು ಶಕ್ತಿ ಮತ್ತು ಚುರುಕುತನ ಹೆಚ್ಚಿಸುತ್ತದೆ.
2. Insulin ಪ್ರಭಾವ ಹೆಚ್ಚಿಸುತ್ತದೆ.
3. ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಣದಲ್ಲಿಡುತ್ತದೆ.
4. ಮೇಲಿನದ್ದೆಲ್ಲಾ ಉತ್ತರ ಸರಿ.

ಉತ್ತರ: ಏರೋಬಿಕ್ಸ್ ಚಟುವಟಿಕೆ ಜೊತೆಗೆ ಭಾರ ಎತ್ತುವ ಅಥವಾ ರೆಸಿಸ್ಟೆನ್ಸ್ ತರಬೇತಿಯನ್ನೂ ವಾರಕ್ಕೆ ಎರಡು ಮೂರು ಬಾರಿ ಮಾಡಬೇಕು. ಮಾಂಸಖಂಡ/ಸ್ನಾಯು ಬೆಳವಣಿಗೆ ದೇಹವನ್ನು ಬಲಗೊಳಿಸುವುದು ಮಾತ್ರವಲ್ಲದೆ ಇನ್ಸುಲಿನ್ ಪ್ರಾಭಾವ ಹೆಚ್ಚಿಸುತ್ತದೆ ಮತ್ತು ರಕ್ತದಲ್ಲಿ ಸಕ್ಕರೆ ಪ್ರಮಾಣವನ್ನೂ ಕಡಿಮೆ ಮಾಡುತ್ತದೆ. ಹೆಚ್ಚು ಕ್ಯಾಲೊರಿ ಬಳಕೆಯಾಗಿ ದೇಹದ ತೂಕವನ್ನೂ ಕಡಿಮೆ ಮಾಡುತ್ತದೆ. ಇದಕ್ಕಾಗಿ ಜಿಮ್ಮಿಗೇ (Gym) ಹೋಗುವ ಅಗತವಿಲ್ಲ. ಯೊಗಾಸನ, ಪುಶ್ ಅಪ್ಸ್, ಡಂಬಲ್ಸ್ ಅಥವಾ ರೆಸಿಸ್ಟನ್ಸ್ ಬ್ಯಾಂಡ್ ಉಪಯೋಗಿಸಿ ಮನೆಯಲ್ಲೇ ಮಾಡಬಹುದು.

ಜುಲೈ ತಿಂಗಳ ಪ್ರೆಶ್ನೆಗೆ ಉತ್ತರ

ಹಣ್ಣುಗಳನ್ನು ತಿನ್ನಬಾರದು (ಅದರಲ್ಲೂ ಡಯಾಬಿಟೀಸ್ ಇರುವವರು) ಏಕೆಂದರೆ ಅವುಗಳಲ್ಲಿ ಸಕ್ಕರೆ ಇರುತ್ತದೆ.ಬಾಳೆಹಣ್ಣು, ಹಲಸಿನಹಣ್ಣು ಮತ್ತು ಮಾವಿನ ಹಣ್ಣುಗಳಲ್ಲಂತೂ ಅತಿ ಹೆಚ್ಚು ಸಕ್ಕರೆ ಇರುತ್ತದೆ. ಆದ್ದರಿಂದ ಮದುಮೇಹಿಗಳಿಗೆ ಅವು ನಿಷಿದ್ಧ. ಸರಿಯೋ - ತಪ್ಪೋ ?

ಉತ್ತರ - ತಪ್ಪು

ಹಣ್ಣುಗಳಲ್ಲಿ ಸಕ್ಕರೆ ಇರುತ್ತದೆ, ನಿಜ. ಆದರೆ ಹಣ್ಣುಗಳು ಅತ್ಯಂತ ಪೌಷ್ಟಿಕ ಆಹಾರ. ವಿಟಮಿನ್, ಮಿನರಲ್ ಗಳು, ಉತ್ಕರ್ಷಣ ನಿರೋಧಕಗಳು (antioxidants) ಮತ್ತು ನಾರಿನಾಂಶ (fibre) ಯಥೇಚ್ಚವಾಗಿರುತ್ತದೆ.

ನೆನಪಿಡಿ: ಸಿಹಿಪದಾರ್ಥಗಳಲ್ಲಿ ಮಾತ್ರವಲ್ಲ, ಅಕ್ಕಿ, ಗೋಧಿ, ರಾಗಿ, ಜೋಳ ಮತ್ತು ಕಾಳುಗಳಲ್ಲೂ ಸಕ್ಕರೆಯ ಅಂಶ ಇರುತ್ತದೆ. ಯಾವ ಆಹಾರ ಪದಾರ್ಥವೇ ಆಗಲಿ, ಯಾವಾಗ,ಎಷ್ಟು ತಿನ್ನುತ್ತೇವೆ ಎನ್ನುವುದು ಮುಖ್ಯ. ದಿನಕ್ಕೆ 2-3 ಹಣ್ಣುಗಳನ್ನು ಸೇವಿಸುವುದು ಉತ್ತಮ ಆರೋಗ್ಯಕ್ಕೆ ಬಹಳ ಸಹಕಾರಿ.
ಒಂದು ಹಣ್ಣು = 150 ಗ್ರಾಂ ತೂಕದ ಯಾವ ಹಣ್ಣಾದರೂ ಸರಿ ಅದು 15-20 ಗ್ರಾಂ ಸಕ್ಕರೆಯನ್ನು ರಕ್ತಕ್ಕೆ ಬಿಡುಗಡೆ ಮಾಡುತ್ತದೆ.

ರಾಂ ರಾಮ

ಇದು ಹಾಸ್ಯ ಪುಟ

ರಾಮನಾಥ್

ಪ್ರಸಿದ್ಧ "ಅಣಕುವಾಡುಗಳ ಸರದಾರ", ಹಾಸ್ಯ ಲೇಖಕರು

ತಾತನ ತಾಪತ್ರಯ

ತಾತ: ತುಂಬಾ ಹೊಟ್ಟೆ ಉರೀತಿದೆ ಡಾಕ್ಟ್ರೆ

ಡಾಕ್ಟರ್: ಡೋಂಟ್ ವರಿ, ಮಾತ್ರೆ ಕೊಡ್ತೀನಿ

ತಾತ: ಬೇಡ. ಉಸಿರಾಡಕ್ಕಾಗಲ್ಲ

ಡಾಕ್ಟರ್: ಯಾಕೆ?

ತಾತ: ಕೈ ನಡುಗತ್ತೆ. ಮಾತ್ರೆ ಬಾಯಿಗೆ ಹಾಕ್ಕೊಳಕ್ಕೆ ಹೋಗಿ ಎಷ್ಟೋ ಸರಿ ಮೂಗಿಗೆ ಒಳ್ಳೆ ವೆಡ್ಡ್ ಆದ ಹಾಗೆ ಕೂತ್ಬಿಡತ್ತೆ.

ಡಾಕ್ಟರ್: ಔಷಧಿ ಕೊಡ್ತೀನಿ

ತಾತ: ಬೇಡ. ಹೆಂಡ್ತಿ ಬೈತಾಳೆ

ಡಾಕ್ಟರ್: ಯಾಕೆ ಬೈತಾರೆ?

ತಾತ: ಡಾಕ್ಟರ್ಸ್ ಬ್ರಾಂದೀನ ಎಷ್ಟೋ ವರ್ಷ ಡಾಕ್ಟರ್ ಕೊಟ್ಟ ಔಷಧೀಂತ ಅವಳಿಗೆ ಸುಳ್ಳು ಹೇಳಿ ಕುಡೀತಿದ್ದೆ. ಗೊತ್ತಾದಾಗ್ಲಿಂದ ಯಾವ ಡಾಕ್ಟ್ರು ಯಾವ ಬಾಟಲ್ ಕೊಟ್ರೂ ಬ್ರಾಂದೀಂತ ಅವಳ ಭ್ರಾಂತಿ!

ಡಾಕ್ಟರ್: ಇಂಜೆಕ್ಷನ್ನು?

ತಾತ: ನೋವಾಗತ್ತೆ. ಒಂದ್ಸರ್ತಿ ಇಂಜೆಕ್ಷನ್ ತೊಗೊಂಡಿದ್ದೆ, ತಕ್ಷಣ ಟೈರ್ ಅಂಗಡೀಗೆ ಹೋದೆ.

ಡಾಕ್ಟರ್: ಯಾಕೆ?

ತಾತ: ಆ ನರ್ಸ್ ಮಾಡಿದ ತೂತಿಗೆ ಪಂಕ್ಚರ್ ಹಾಕಿಸ್ಕೊಳಕ್ಕೆ.

ಡಾಕ್ಟರ್: ಸರೀ, ಹೊಟ್ಟೆ ಉರಿ ಶುರು ಆಗಿದ್ದು ಯಾವಾಗ?

ತಾತ: ಪಕ್ಕದ ಮನೆಯವನು ಹೊಸ ಕಾರ್ ತೊಗೊಂಡಾಗ್ಲಿಂದ!

ಡಾಕ್ಟರ್: ನೀವು ಈ ವಯಸ್ಸಲ್ಲಿ ಈ ತರಹ ಹೊಟ್ಟೆ ಉರ್ಕೋಬಾರ್ದು

ತಾತ: ಹಾಗಾದ್ರೆ ಹೊಟ್ಟೆ ಉರ್ಕೊಳಕ್ಕೆ ಸರಿಯಾದ ವಯಸ್ಸು ಯಾವುದು ಡಾಕ್ಟ್ರೆ?

ಡಾಕ್ಟರ್: ತಾತಾ... ನನ್ನ ಕ್ಲಿನಿಕ್ ಟೈಂ ವೇಸ್ಟ್ ಮಾಡ್ಬೇಡಿ. ನಿಮಗೆ ನಿಜವಾಗಲೂ ಏನಾಗ್ತಿದೆ ಹೇಳಿ

ತಾತ: ವಯಸ್ಸಾಗ್ತಿದೆ ಡಾಕ್ಟ್ರೆ.

ಡಾಕ್ಟರ್: ತಾತಾ.....

ತಾತ: ನನ್ನ ಎಡಗಡೆ ಕಾಲು ಬಹಳ ನೋವತ್ತೆ.

ಡಾಕ್ಟರ್: ಅದು ವಯಸ್ಸಾಗಿರೋದ್ರಿಂದ ಹಾಗೆ ತಾತ.

ತಾತ: ಸುಮ್ಮನೆ ಏನೋ ಹೇಳ್ಬೇಡಿ ಡಾಕ್ಟ್ರೆ. ನನ್ನ ಬಲಗಾಲಿಗೂ ಅಷ್ಟೇ ವಯಸ್ಸಾಗಿದೆ, ಅದ್ಯಾಕೆ ನೋಯ್ತಿಲ್ಲ?

ಡಾಕ್ಟರ್: ಅದು ಹಾಗಲ್ಲ; ನಾವು ಯಾವುದರ ಮೇಲೆ ಭಾರ ಬಿಡ್ತೀವೋ ಅದು ನೋವು ಬರತ್ತೆ.

ತಾತ: ಆದರೆ ನಾನು ಭಾರ ಬಿಡೋದು ವಾಕಿಂಗ್ ಸ್ಟಿಕ್ ಮೇಲೆ. ಅದಕ್ಕೇ ಅಯೋಡೆಕ್ಸ್ ಹಚ್ಚಿಬಿಡ್ಲೇನು?

ಡಾಕ್ಟರ್: ತಾತಾ...

ತಾತ: ನೀವು ಡಾಕ್ಟರ್ಗಳೇ ಹಾಗೆ

ಡಾಕ್ಟರ್: ಹೇಗೆ?

ತಾತ: ಪೇಷೆಂಟ್ ಬರ್ತಾ ಇದ್ದಹಾಗೇ ತಾ ತಾ ಅಂತ ಬರೀ ಕೈಯೊಡ್ಡೋದೇ ಆಗ್ಹೋಯ್ತು.

ಡಾಕ್ಟರ್: ಪ್ಲೀಸ್ ಅಜ್ಜ, ನನ್ನ ತಲೆ ತಿನ್ಬೇಡಿ. ನಿಮ್ಮ ಕಂಪ್ಲೇಂಟ್ ಏನೂಂತ ಹೇಳಿ.

ತಾತ: ಬೆಳಗ್ಗೆ ಪಾರ್ಕಲ್ಲಿ ಜೋರಾಗಿ ಓಡಿದಾಗ ಎದೆ ಬಹಳ ಜೋರಾಗಿ ಹೊಡ್ಕೊಳತ್ತೆ

ಡಾಕ್ಟರ್: ಈ ವಯಸ್ಸಲ್ಲಿ ನೀವು ಜೋರಾಗಿ ಓಡ್ತೀರಾ?

ತಾತ: ನಾನಲ್ಲ

ಡಾಕ್ಟರ್: ಮತ್ತೆ?

ತಾತ: ಸೂಪರ್ ಆಗಿರೋ ಹುಡುಗಿಯರು ಓಡ್ತಾರೆ, ನನ್ನೆದೆ ಹೊಡ್ಕೊಳತ್ತೆ.

ಡಾಕ್ಟರ್: ಅಜ್ಜ... ಪ್ಲೀಸ್ ಬಿ ಸೀರಿಯಸ್

ತಾತ: ಯಾಕೆ ಡಾಕ್ಟ್ರೆ, ಸೀರಿಯಸ್ ಆದ್ರೆ ಒಳ್ಳೆ ಕಾಸು ಎಳ್ಕೋಬಹುದು ಅಂತಾನಾ?

ಡಾಕ್ಟರ್: ಥೂ, ಆ ತರಹ ಸೀರಿಯಸ್ಸಲ್ಲ ಅಜ್ಜ ನಾ ಹೇಳಿದ್ದು. ಸರಿ, ಈಗ ಇಲ್ಲಿಗೆ ಬಂದಿದ್ದಾದ್ರೂ ಯಾಕೆ ಹೇಳಿ.

ತಾತ: ಹೇಳಿದ್ನಲ್ಲ ಡಾಕ್ಟ್ರೇ, ಕಾಲು ಬಹಳ ನೋಯತ್ತೆ ಅಂತ

ಡಾಕ್ಟರ್: ಸರಿ. ಒಬ್ಬ ಸರ್ಜನ್‌ಗೆ ರೆಫರ್ ಮಾಡ್ತೀನಿ, ಅಲ್ಲಿ ತೋರಿಸಿ

ತಾತ: ಸರ್ಜನ್ನಾ? ಬೇಡ

ಡಾಕ್ಟರ್: ಯಾಕೆ?

ತಾತ: ಗಾದೆ ಕೇಳಿಲ್ಲವೇನು? ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ಸರ್ಜನರ ಸಹವಾಸ ಹೆಜ್ಜೇನು ಕಡಿದಂತೆ. ನನ್ನ ಫ್ರೆಂಡ್‌ಗೆ ಆಗಿದ್ದನ್ನ ಕೇಳಿ ಏನೇ ಆದರೂ ಸರ್ಜನ್ ಹತ್ರ ಹೋಗಬಾರದೂಂತ ಡಿಸೈಡ್ ಮಾಡಿದ್ದೀನಿ

ಡಾಕ್ಟರ್: ಏನಾಯ್ತು?

ತಾತ: ಹೊಟ್ಟೆ ಆಪರೇಷನ್. ಮೊದಲು ಮಾಡಿದರು. ಇವನಿಗೆ ಬಹಳ ಬಾಯಾರಿಕೆ ಶುರುವಾಯ್ತು.

ಡಾಕ್ಟರ್: ಏಕೆ?

ತಾತ: ಒಳಗೆ ಸ್ಪಂಜ್ ಬಿಟ್ಟಿಟ್ಟಿದ್ರು. ಮತ್ತೆ ಕೊಯ್ದು.

ಡಾಕ್ಟರ್: ಸರಿಹೋಯ್ತಾ?

ತಾತ: ಇಲ್ಲ. ಇದ್ದಕ್ಕಿದ್ದ ಹಾಗೆ ಆಕಡೆಯಿಂದ ಈ ಕಡೆಗೆ ತಿರುಗಿದಾಗಲೆಲ್ಲಾ ಒಳಗೆ ಕಚಕ್ ಅಂತ ಶಬ್ದ ಬರ್ತಿತ್ತು.

ಡಾಕ್ಟರ್: ಅಯ್ಯೋ, ಯಾಕಂತೆ?

ತಾತ: ಒಳಗೆ ಕತ್ತರಿ ಬಿಟ್ಟಿಟ್ಟಿದ್ರು. ಮತ್ತೆ ಹೊಟ್ಟೆ ಕೊಯ್ದಿದ್ದಾಯ್ತು.

ಡಾಕ್ಟರ್: ಆಗ ಸರಿಹೋಯ್ತೂನ್ನಿ.

ತಾತ: ಇಲ್ಲ. ಒಳಗೇ ಏನೋ ಚುಚ್ಚಿದಹಾಗೆ ಆಗ್ತಿತ್ತು. ನೋಡಿದ್ರೆ ಸೂಜಿ.

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ.

ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ಮುಂದಿನ ಪುಟ ನೋಡಿ

ಡಾಕ್ಟರ್: ಮತ್ತೆ ಆಪರೇಷನ್ ಆಯ್ತೂನ್ನಿ.
ತಾತ: ಇಲ್ಲ.
ಡಾಕ್ಟರ್: ಮತ್ತೆ?
ತಾತ: ಹೊಟ್ಟೆ ಮೇಲೆ ಒಂದು ಮ್ಯಾಗ್ನೆಟ್ ಕಟ್ಕೊಂಡ್ಬಿಟ್ಟಿದ್ದಾನೆ. ಈಗ ಸೂಜಿ ಅಲ್ಲಾಡದೆ ಒಂದೇ ಜಾಗದಲ್ಲೇ ಇರೋದ್ರಿಂದ ನೋವಿಲ್ಲ!
ಡಾಕ್ಟರ್: ಒಳಗೆ ರಸ್ಟ್ ಆಗ್ಬಿಟ್ರೆ?
ತಾತ: ಆಗಲ್ಲ, ಆಗಾಗ್ಗೆ ಹೊಟ್ಟೆಗೆ ಸ್ವಲ್ಪ ಎಣ್ಣೆ ಬಿಟ್ಕೊಳಕ್ಕೆ ಹೇಳಿದ್ದೀನಿ.
ಡಾಕ್ಟರ್: ಹಾಗೇ ಇರೋದು ಒಳ್ಳೇದಲ್ಲ ತಾತ. ತೆಗೆಸಿಕೊಂಡುಬಿಡಕ್ಕೆ ಹೇಳಿ.
ತಾತ: 'ಬೇಡ, ಇನ್ನೇನಾದ್ರೂ ಒಳಗೆ ಬಿಡ್ತಾರೆ. ಇದೇ ವಾಸಿ' ಅಂದ
ಡಾಕ್ಟರ್: ನೀವೇನಂದ್ರಿ?
ತಾತ: ಆಪರೇಷನ್ ಮಾಡಿಸ್ಕೋ, ಆದರೆ ಹೊಲಿಗೆ ಹಾಕಿಸ್ಕೋಬೇಡ ಅಂದೆ.
ಡಾಕ್ಟರ್: ಮತ್ತೆ?
ತಾತ: ಝಿಪ್ ಹಾಕಿಸ್ಕೋಂದೆ. ಏನೇ ಬಿಟ್ಟಿದ್ರೂ ಝಿಪ್ ಝರ್ ಅಂತ ಎಳೆಯೋದು, ತೆಗೆಯೋದು, ಝಿಪ್ ಎಳೆಯೋದು!
ಡಾಕ್ಟರ್: ಸೂಪರ್ ಐಡಿಯ ಅಜ್ಜ. ಆದರೂ, ನಿಮ್ಮ ಕಾಲುನೋವಿಗೆ ಒಮ್ಮೆ ಸರ್ಜನ್‌ನ ನೋಡಿಬಿಡಿ.
ತಾತ: ಬೇಡ.
ಡಾಕ್ಟರ್: ಯಾಕೆ?
ತಾತ: ನಮ್ಮ ಮನೆ ಹತ್ತಿರ ಇರೋ ಸರ್ಜನ್ ಬೋರ್ಡ್ ಹಾಕಿದ್ದಾನೆ.
ಡಾಕ್ಟರ್: ಏನಂತ?
ತಾತ: ನಮ್ಮಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ಶ್ರಾದ್ಧದ ಖರ್ಚು ಉಚಿತ ಅಂತ!
ಡಾಕ್ಟರ್: ಹೋಗಲಿ ಬಿಡಿ. ನಿಮಗೆ ಆಯುರ್ವೇದಿಕ್ ಟ್ರೀಟ್‌ಮೆಂಟೇ ಕೊಡ್ತೀನಿ.
ತಾತ: ಇದ್ದಿದ್ರಲ್ಲಿ ಸ್ವೀಟ್ ಆಗಿರೋ ಲೇಹ್ಯಾನೇ ಕೊಡಿ ಡಾಕ್ಟರ್
ಡಾಕ್ಟರ್: ಏನಾದರೂ ಡ್ರಿಂಕ್ಸ್ ಗಿಂಕ್ಸ್ ಅಭ್ಯಾಸ ಇದೆಯೇನು?
ತಾತ: ಈಗಿಲ್ಲ ಡಾಕ್ಟ್ರೆ. ನನಗೆ ಡ್ರಿಂಕ್ಸ್ ತೊಗೊಂಡ್ರೆ ಬಹಳ ನೆಗಡಿ ಆಗತ್ತೆ.
ಡಾಕ್ಟರ್: ಡಿಂಕ್ಸ್ ತೊಗೊಂಡ್ರೆ ನೆಗಡಿ ಆಗತ್ತಾ?
ತಾತ: ಹೂಂ ಕುಡಿದು ಬಂದಾಗ ಹೆಂಡತಿ ತಲೆಮೇಲೆ ನೀರು ಸುರೀತಾಳಲ್ಲಾ, ಅದರಿಂದ ನೆಗಡಿ ಆಗತ್ತೆ.
ಡಾಕ್ಟರ್: ಓಕೆ. ಅಲ್ಲಿಗೆ ನೋ ಡ್ರಿಂಕ್ಸ್ ಅಂತಾಯ್ತು. ಖಾರ ತಿಂತೀರಾ?
ತಾತ: ನನ್ನ ಹೆಂಡತಿ ಮಾತಿನ ಮುಂದೆ ಮೆಣಸಿನಪುಡೀನೂ ಸ್ವೀಟ್ ಡಾಕ್ಟ್ರೆ!
ಡಾಕ್ಟರ್: ಅಂದರೆ ಹೆಂಡತಿ ಮಾತು ಕೇಳ್ತೀರಾನ್ನಿ.
ತಾತ: ಕೇಳದೆ ಇದ್ರೆ ಕಿವಿ ಆಪರೇಷನ್ ಮಾಡಿಸ್ತೀನಿ ಅಂತಾಳೆ ಡಾಕ್ಟ್ರೆ.
ಡಾಕ್ಟರ್: ಡ್ರಿಂಕ್ಸು, ಖಾರ ಇಲ್ಲಾಂದ್ಮೇಲೆ ನಿಮ್ಮ ಕಾಲುನೋವಿಗೆ ಕಾರಣ ವಾಯುಬಾಧೆ ಅಲ್ಲ; ನಿಮ್ಮ ನಿದ್ರೆ ಹೇಗಿದೆ?
ತಾತ: ರಿಟೈರಾದ ಸ್ವಲ್ಪ ದಿವಸ ನಿದ್ರೇನೇ ಬರ್ತಿರಲಿಲ್ಲ.
ಡಾಕ್ಟರ್: ಆಮೇಲೆ?
ತಾತ: ನಾನು ವರ್ಕ್ ಮಾಡ್ತಿದ್ದ ಸರ್ಕಾರಿ ಕಚೇರಿಯಿಂದ ನಾನು ದಿನಾ ಕೂತು ನಿದ್ರೆ ಮಾಡ್ತಿದ್ದ ಚೇರ್ ತರಿಸ್ಕೊಂಡೆ. ಅದರಲ್ಲಿ ಕೂತ್ರೆ ಸಾಕು, ಹೈ ಕ್ಲಾಸ್ ನಿದ್ರೆ ಬರತ್ತೆ.
ಡಾಕ್ಟರ್: ಸರಿ; ನಿದ್ರೆ, ವಾಯು ಪ್ರಾಬ್ಲಂ ಅಲ್ಲಾಂತಾಯ್ತು. ನಿಮಗೆ ಯಾವಾಗ ನೋವು ಜಾಸ್ತಿ ಇರತ್ತೆ?
ತಾತ: ಶನಿವಾರ, ಭಾನುವಾರ.
ಡಾಕ್ಟರ್: ಅದೇನು?
ತಾತ: ನನ್ನ ಹೆಂಡತಿ ಕಿಟ್ಟಿ ಪಾರ್ಟಿಗೆ ಹೋಗಿರ್ತಾಳೆ.
ಡಾಕ್ಟರ್: ಅದಕ್ಕೂ ಇದಕ್ಕೂ ಏನು ಸಂಬಂಧ?
ತಾತ: ನಮ್ಮ ಮನೆ ಹಿಂಭಾಗದಲ್ಲಿ ಒಂದು ಲೇಡೀಸ್ ಹಾಸ್ಟೆಲ್ ಇದೆ.
ಡಾಕ್ಟರ್: ಸರಿ. ಅದಕ್ಕೂ, ಕಿಟ್ಟಿ ಪಾರ್ಟಿಗೂ, ಕಾಲುನೋವಿಗೂ ಏನು ಸಂಬಂಧ?
ತಾತ: ಸುಮ್ಮನೆ ಹಾಗೆ ನಿಂತ್ರೆ ಆ ಹಾಸ್ಟೆಲ್‌ನಲ್ಲಿ ಹುಡುಗಿಯರು ಚೆಲ್ಲುಚೆಲ್ಲಾಗಿ ಆಡೋದು ಕಾಣಲ್ಲ
ಡಾಕ್ಟರ್: ಅದಕ್ಕೆ?
ತಾತ: ಒಂದು ಏಣಿ ಹಾಕ್ಕೊಂಡು ನಿಲ್ತೀನಿ.
ಡಾಕ್ಟರ್: ಹೂಂ?
ತಾತ: ಬಲಗಾಲು ಕಾಂಪೌಂಡ್ ಮೇಲಿರತ್ತೆ, ನೋವಿರಲ್ಲ, ಎಡಗಾಲು ಏಣಿ ಮೇಲಿರತ್ತೆ, ನೋವು ಬರತ್ತೆ!
ಡಾಕ್ಟರ್: ತಾತಾ... ಈ ವಯಸ್ಸಲ್ಲೀ... ಹುಡುಗೀರ್ನ ಕದ್ದು ನೋಡೋದೂಂದ್ರೆ.... ಛೀ!
ತಾತ: ಹಾಗೆಲ್ಲಾ ಬಿಡಕ್ಕಾಗತ್ತಾ, ಇದು ನನ್ನ ಗೋಲ್ಡನ್ ಜ್ಯೂಬಿಲಿ ವರ್ಷ ಗೊತ್ತಾ?
ಡಾಕ್ಟರ್: ನಿಮಗೆ ಇನ್ನೂ ಐವತ್ತೇನಾ?
ತಾತ: ನನಗಲ್ಲ, ಹುಡುಗೀರ್ನ ನೋಡಕ್ಕೆ ಶುರು ಮಾಡಿ ಐವತ್ತು ವರ್ಷ. 16ಕ್ಕೆ ಶುರು ಮಾಡ್ದೆ, ಈಗ 66!
ಡಾಕ್ಟರ್: ಟ್ರೀಟ್‌ಮೆಂಟ್ ಬೇಕಾದ್ದು ನಿಮ್ಮ ಕಾಲಿಗಲ್ಲ, ತಲೆಗೆ. ಗೆಟ್ ಔಟ್ ತಾತ. ಯಾವುದಾದರೂ ಹುಚ್ಚಾಸ್ಪತ್ರೇಲಿ ಟ್ರೀಟ್‌ಮೆಂಟ್ ತೊಗೊಳ್ಳಿ, ಸರಿಹೋಗತ್ತೆ.
ತಾತ: ಅಲ್ಲೂ ಹೋಗಿದ್ದೆ. ಸೇರಿಸ್ಕೊಳಲ್ಲಾಂದ್ರು
ಡಾಕ್ಟರ್: ಯಾಕಂತೆ?
ತಾತ: ಅಲ್ಲಿ ವಾಸಿಯಾಗೋ ಹುಚ್ಚರನ್ನು ಮಾತ್ರ ಸೇರಿಸ್ಕೊತ್ತಾರಂತೆ!
ಡಾಕ್ಟರ್: ಸರಿ ಅಜ್ಜ. ನಿಮಗೇನು ಟ್ರೀಟ್‌ಮೆಂಟ್ ಕೊಡಬೇಕೂಂತ ಗೊತ್ತಾಯ್ತು. ನಿಮ್ಮ ಮನೆಯ ಫೋನ್ ನಂಬರ್ ಏನು?
ತಾತ: ಯಾಕೆ?
ಡಾಕ್ಟರ್: ಅಜ್ಜಿಗೆ ಕಿಟ್ಟಿ ಪಾರ್ಟಿ ಮನೇಲೇ ಇಟ್ಕೊಳ್ಳಕ್ಕೆ ಹೇಳ್ತೀನಿ, ನಿಮ್ಮ ಆಟ ಕಟ್ ಆಗಿ, ನೋವು ಮಾಯ ಆಗತ್ತೆ.
ತಾತ: ಥ್ಯಾಂಕ್ಯೂ ವೆರಿ ಮಚ್. ನನಗೂ ಅದೇ ಬೇಕಾಗಿತ್ತು.
ಡಾಕ್ಟರ್: ಯಾಕೆ?
ತಾತ: ಇವಳ ಕಿಟ್ಟಿ ಪಾರ್ಟೀಲಿ ಹಾಸ್ಟೆಲ್ ಹುಡುಗೀರಿಗಿಂತ ಚೆನ್ನಾಗಿರೋವ್ರು ಸೇರ್ತಾರೆ. ಥ್ಯಾಂಕ್ಸ್ ಡಾಕ್ಟರ್. ತೊಗೊಳ್ಳಿ, ನಂಬರ್ ಬರ್ಕೊಳ್ಳಿ!!! ▪

ರಾಮನಾಥ್ ಅವರ

"ರಾಜಕೀಯ ರಾಗ" - ಅಣಕುವಾಡುಗಳು

YouTube ನಲ್ಲಿ ನೋಡಲು

ಕೆಳಗಿನ ಚಿತ್ರ ಕ್ಲಿಕ್ಕಿಸಿ

ಸುಮ್ಕೆ ನಕ್ಬಿಡಿ

ಯೋಗ ಮತ್ತು Indian songs ಆರೇ ವಾರದಲ್ಲಿ, self-realisation ನಾಲ್ಕೇ ವಾರದಲ್ಲಿ ಇಲ್ಲಾಂದ್ರೆ moneyback ಗ್ಯಾರಂಟಿ!

ಮನವರಿಕೆ

ಲೇಖಕರು: ಕನಕಾಪುರ ನಾರಾಯಣ

ಮುದುಕನೊಬ್ಬನು ತನ್ನ ಹೆಂಡತಿಯನ್ನು ಕಳೆದುಕೊಂಡ ನಂತರ ತನ್ನ ಮಗನ ಮನೆಯಲ್ಲೇ ವಾಸ ಮಾಡಲು ನಿರ್ಧರಿಸಿದ.ವಯಸ್ಸಿನ ಅಂತರದ ಕಾರಣ ಮಗ ಸೊಸೆ ಆಗಾಗ್ಗೆ ಮುದುಕನ ಮನಸ್ಸಿಗೆ ನೋವಾಗುವ ಹಾಗೆ ನಡೆಯುತ್ತಿದ್ದರು.ಊಟ ಮಾಡುವಾಗ ತಟ್ಟೆಯಿಂದ ಆಹಾರ ಚೆಲ್ಲಿದರೆ, ಹಾಲು ಲೋಟದಿಂದ ಚೆಲ್ಲಿದರೆ, ಕೈಜಾರಿ ಚಮಚ ಕೆಳಗೆ ಬಿದ್ದರೆ ಮಗ ಸಿಟ್ಟಿನಲ್ಲಿ ತಂದೆ ಎನ್ನುವುದನ್ನೇ ಮರೆತು ರೇಗುತ್ತಿದ್ದ. ಕೈಲಾಗದ,ಕೈನಡುಗುವ ಮುದುಕ ತನ್ನ ಮಗ ಸೊಸೆ ಏನು ಹೇಳಿದರೂ ಸಹಿಸಿಕೊಂಡು ಬದುಕು ಸಾಗಿಸುತ್ತಿದ್ದ.ದಿನಾ ಊಟಕ್ಕೆ ಒಟ್ಟಿಗೆ ಕುಳೀತುಕೊಳ್ಳುತ್ತಿದ್ದವರು ಮುದುಕನನ್ನು ಬೇರೊಂದು ಮೇಜು ಹಾಕಿ ಕೂಡಿಸಲಾಯಿತು. ಕೈಜಾರಿ ಒಡೆದ ಕಾರಣ ಪಿಂಗಾಣಿ ತಟ್ಟೆಯ ಬದಲಿಗೆ ಮರದ ತಟ್ಟೆ,ಮರದ ಚಮಚವನ್ನೂ ಕೊಟ್ಟರು.ಕುಟುಂಬದವರೆಲ್ಲಾ ಒಟ್ಟಿಗೆ ಸಂತೋಷದಿ ಉಣ್ಣಲು ಮುದುಕ ಮಾತ್ರ ಬೇಸರದಿಂದ ಒಂಟಿಯಾಗಿ ಮೂಲೆಯಲ್ಲಿ ಕುಳಿತು ಒಲ್ಲದ ಮನಸ್ಸಿನಲ್ಲಿ ಊಟ ಮಾಡುತ್ತಿದ್ದನು.

ಅವನು ಊಟ ಮಾಡಿದ ಮೇಲೆ ಆ ಜಾಗವನ್ನು ಸ್ವಚ್ಚ ಮಾಡುವಾಗ ತಟ್ಟೆಯ ಸುತ್ತಲೂ ಚೆಲ್ಲಿದ್ದಕ್ಕಾಗಿ ಬೈಗುಳ ಕೇಳಬೇಕಾಗಿತ್ತು. ಇವೆಲ್ಲವನ್ನೂ ಅದೇ ಮನೆಯಲ್ಲೇ ಇದ್ದು ಗಮನಿಸುತ್ತಿದ್ದ ಮುದುಕನ ಮೊಮ್ಮಗ ನಾಲ್ಕು ವರ್ಷದ ಬಾಲಕ.ಅವನು ಆಟವಾಡುವಾಗ ಒಮ್ಮೆ ಮರದ ಹಲಗೆಗಳನ್ನು ಗರಗಸದಿಂದ ಕತ್ತರಿಸಲು ಪ್ರಯತ್ನ ಮಾಡುತ್ತಿದ್ದ.ಹರಿತವಾದ ಹಲ್ಲುಗಳಿದ್ದ ಗರಗಸ ಮಗನ ಕೈಗೆ ತಗುಲಿತೆಂದು ಅವನ ತಂದೆ ಮೆಲ್ಲನೆ ಅದನ್ನು ಕಸಿದುಕೊಂಡು"ಮಗೂ ಏನು ಮಾಡ್ತಿದ್ದೀಯಪ್ಪಾ?"ಎಂದು ಕೇಳಿದ.ಅದಕ್ಕೆ ಪುಟ್ಟ ಬಾಲಕ "ಅಪ್ಪಾ ಮರದಲ್ಲಿ ಎರಡು ತಟ್ಟೆ, ಚಮಚ ಮಾಡ್ತಿದ್ದೇನೆ ಮುಂದೆ ನಿಮಗೆ ಬೇಕಾಗಬಹುದಲ್ಲವೇ" ಅಂದ.ಆತನ ತಂದೆ ತಾಯಿ ಈ ಮಾತನ್ನು ಕೇಳಿ ದಂಗಾದರು,ತಾವು ಮಾಡಿದ ತಪ್ಪು ಅರಿವಾಯಿತು.ಮರುದಿನವೇ ಮುದುಕನಿಗೂ ಒಂದೇ ಮೇಜಿನ ಮೇಲೆ ಊಟ ಬಡಿಸಲಾಯಿತು.ಎಲ್ಲರೂ ಕೂಡಿ ಸಂತೋಷದಿಂದ ಉಂಡು ಬಾಳಿದರು.

ನೀತಿ: ಮಕ್ಕಳ ಮನಸ್ಸು ಬಲು ಸೂಕ್ಷ್ಮ, ಮಕ್ಕಳಿಂದ ಬಹಳಷ್ಟು ಹಿರಿಯರೂ ಕಲಿಯುವುದಿದೆ.

ರೆಸಿಪಿ ಕೊಡ್ತೀರಾ!

ಅವರೇಕಾಯಿ ಟೊಮೊಟೋ ಭಾತ್

ಬೇಕಾಗುವ ಸಾಮಾನು:

ಅಕ್ಕಿ1ಪಾವು(ಲೋಟ),ಹಸಿ ಅವರೇಕಾಳು1ಪಾವು,ಟೊಮೊಟೋ 5,ಈರುಳ್ಳಿ 3-4,ಒಣಮೆಣಸಿನ ಕಾಯಿ 8-10,ಗರಂ ಮಸಾಲ 1ಚಮಚ,ಗಸಗಸೆ 1ಚಮಚ,ಬಿಳಿ ಎಳ್ಳು1ಚಮಚ,ಶುಂಟಿ 2ಗೋಲಿ ಗಾತ್ರ, ಕೊತ್ತಂಬರಿ ಸೊಪ್ಪು 1ಕಂತೆ,ತೆಂಗಿನ ತುರಿ 1ಬಟ್ಟಲು ಎಣ್ಣೆ 40 ಗ್ರಾಂ,ಉಪ್ಪು 1-2 ಚಮಚ,

ಮಾಡುವ ವಿಧಾನ:

***ಮೆಣಸಿನ ಕಾಯಿ,ಎಳ್ಳು,ಗರಂ ಮಸಾಲ ಒಟ್ಟಿಗೆ ಹುರಿದು ನುಣ್ಣಗೆ ರುಬ್ಬಿಕೊಳ್ಳಿ,**

***ಪಾತ್ರೆಯಲ್ಲಿ ಎಣ್ಣೆಹಾಕಿ ಕಾದ ನಂತರ ಹೆಚ್ಚಿದ ಈರುಳ್ಳಿ,ಟೊಮೋಟೊ ಹಾಕಿ ಬಾಡಿಸಿ,**

***ನಂತರ ಅವರೇಕಾಯಿ ಸ್ವಲ್ಪನೀರು ಸೇರಿಸಿ ಕುದಿಸಿ ಬೇಯಿಸಿ,**

***ಅದಕ್ಕೆ ನೆನೆಸಿಟ್ಟ ಅಕ್ಕಿಗೆ ರುಬ್ಬಿದ ಮಸಾಲೆ,ಉಪ್ಪು ಸೇರಿಸಿ ಸುರಿದು ಅಕ್ಕಿ ಬೇಯುವ ವರೆಗೂ ಬೇಯಿಸಿ,**

***ಮೇಲೆ ಎರಡು ಚಮಚ ತುಪ್ಪ,ಕೊತ್ತಂಬರಿ ಉದುರಿಸಿ ಬಿಸಿಯಿರುವಾಗಲೇ ತಿನ್ನಲು ಕೊಡಿ.**

ಇನ್ನೂ ನೂರಾರು ರೆಸಿಪ್ಪೆಗಳಿಗೆ **www.sugamakannada.com** ಗೆ ಭೇಟಿಕೊಡಿ.

ಇದೇನ್ಲಾ ಇದು

೧. ಅವನೊಬ್ಬ ಅಡವಿ ಕುಮಾರ, ಕಣ್ಣು ಕೆಂಪಗೆ, ಕಿವಿ ನೆಟ್ಟಗೆ, ಮೂಗು ಚೂಪಗೆ

೨. ನೋಡಿದರೆ ನೋಟ, ನಕ್ಕರೆ ನಗು, ಒಡೆದರೆ ಚೂರು

ಉತ್ತರಕ್ಕೆ ಪುಟ ೮ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ದಂಪತಿಗಳ ಬಯಕೆ ...

ತನು ಒಂದಾಯ್ತು |
ಮನ ಒಂದಾಯ್ತು |
ತನುಮನಗಳು ಕೂಡಿದಾನಂದಕೆ
ಸಾಕ್ಷಿಯೆನಿಸೆ |
ಆನಂದ ಮಧುಮತಿಗಳ
ಮನಮನೆತನ ವೃದ್ಧಿಸುವ |
ಆನಂದಕಂದ ಅವರ ತೊಡೆಯೇರಿ
ಆಡಿದರವರ |
ಮನಕಾನಂದ ವರ್ಣಿಸೆ
ಫಣಿಪತಿಗುಂ ಅಸದಳಮಕ್ಕುಂ |

ರಚನೆ: ಮಾಸ್ತರ್ ಹಿರಣ್ಣಯ್ಯ

ಅಮರ ಮಧುರ ಪ್ರೇಮ ...

ಎದೆಗೆ ಎದೆಯು ಒಲಿದು ಬೆಸೆದ
ನನ್ನ ಇವನ ಪ್ರೇಮ
ಉರಿವ ಧೂಪದಿಂದ ಬಂದ
ಘಮ್ಮೆನುವ ಧೂಮ!

ಮಾತಿಗಿಂತ ಮುತ್ತು ಹಿರಿದು
ಎಂಬುವುದು ನಮ್ಮ ನಿಯಮ
ತುಟಿಗೆ ತುಟಿಯ ಬೆರೆಸುವುದೇ
ದಿನ ನಿತ್ಯದ ನೇಮ!

ಕಳೆದ ನಿನ್ನೆ ಬರುವ ನಾಳೆ
ನಮಗಿಲ್ಲ ಅದರ ಚಿಂತೆ
ಇಂದು ಮುಗಿವ ಮುನ್ನ ಇಹೆವು
ರಾಧೇ ಶ್ಯಾಮರಂತೆ!

ರಚನೆ: ಮಾಲು (ಅಡಿಲ್ಪೈಡ್)

ಹಾಸ್ಯ ಚಿಲುಮೆ

ಹುಚ್ಚಾಸ್ಪತ್ರೆಯಲ್ಲಿ ರೋಗಿಯೊಬ್ಬ ಬಾವಿಯ ಸುತ್ತಲೂ ಸುತ್ತುತ್ತಾ 27,,,,27,,,,27,,,,27,,,,ಅನ್ನುತ್ತಿದ್ದ.



ಹೊಸದಾಗಿ ಕೆಲಸಕ್ಕೆ ಸೇರಿದ್ದ ವೈದ್ಯರು ಕುತೂಹಲದಿಂದ ಹತ್ತಿರಕ್ಕೆ ಹೋಗಿ ಬಾವಿಯಲ್ಲಿ ಏನಿದೆ ಹೀಗೆ ಎಣಿಸುತ್ತಿದ್ದಾನಲ್ಲಾ ಎಂದು ಇಣುಕಿದನು...

ಅಷ್ಟರಲ್ಲಿ ಅವನನ್ನು ಆ ರೋಗಿ ಒಳಕ್ಕೆ ದಬ್ಬಿ 28,,,28,,,28,,,ಎಂದು ಮತ್ತೆ ಸುತ್ತುತ್ತಿದ್ದನು

ದೇಶದ ಪ್ರಧಾನಿ ನೆಹರು ಹುಚ್ಚಾಸ್ಪತ್ರೆಗೆ ಒಮ್ಮೆ ಭೇಟಿ ಕೊಟ್ರಂತೆ. ಬಾಗಿಲಿನಲ್ಲೇ ಒಬ್ಬಾತ ಅವರನ್ನು ನಿಲ್ಲಿಸಿ "ಯಾರು ನೀನು?" ಅಂದ.

ಅದಕ್ಕೆ ಅವರು "ನಾನು ಭಾರತದ ಪ್ರಧಾನಿ," ಅಂದರು. ಹುಚ್ಚ ನಕ್ಕು "ನಾನೂ ಇಲ್ಲಿಗೆ ಬಂದಾಗ ನಾನ್ ಗಾಂಧೀ ಅಂತೆಲ್ಲಾ ಹೇಳ್ತಿದ್ದೆ, ಒಳಗೆ ಹೋಗು ಎಲ್ಲ ಸರಿ ಮಾಡ್ತಾರೆ, ಕರ್ಕೊಂಡು ಹೋಗ್ರಿ ಇವನನ್ನ"

ರೋಗಿ: ಡಾಕ್ಟ್ರೇ ಇದು Operation Theatre. ಇಲ್ಲೇಕೆ ಹೂವಿನ ಹಾರ ಇದೆ?

ಡಾಕ್ಟರ್: ಇದು ನನ್ನ ಮೊದಲ ಆಪರೇಶನ್, ಸಕ್ಸಸ್ ಆದ್ರೆ ನನಗೆ, ಇಲ್ಲಿದ್ದೆ.....

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಕನ್ನಡಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಸಾಹಿತಿ ಯಾರು? ಯಾವ ಕೃತಿಗೆ? ಯಾವ ವರ್ಷದಲ್ಲಿ?

೨. "ಚಿಕ್ಕ ವೀರ ರಾಜೇಂದ್ರ" ಕೃತಿಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿ ಯಾರು? ಅದು ಕನ್ನಡಕ್ಕೆ ದೊರಕಿದ ಎಷ್ಟನೆಯ ಜ್ಞಾನಪೀಠ ಪ್ರಶಸ್ತಿ?

ಸರಿ ಉತ್ತರಕ್ಕೆ ಪುಟ ೧೧ ನೋಡಿ

ಇದೇನ್ಲಾ ಇದು – ಉತ್ತರ

೧. ಮೊಲ 2. ಕನ್ನಡಿ

ಸಂತೋಷಕ್ಕೆ ಹಬ್ಬ ಹರಿದಿನ

ಲೇಖಕರು: ಸ್ಮಿತಾ ಮೇಲ್ಕೋಟೆ

ಹೊರನಾಡ ಚೆಲುಮೆಯ ಬುಗ್ಗೆಯು ಮೂರನೇ ತಿಂಗಳಿಗೆ ಕಾಲಿಟ್ಟಿದೆ. ಉಪಯುಕ್ತ ಮಾಹಿತಿಗಳನ್ನು ಹಂಚಿಕೊಳ್ಳುತ್ತಿರುವ ಚೆಲುಮೆಯಲ್ಲಿ ಹಬ್ಬ ಹರಿದಿನದ ವಿಶೇಷ ದಿನಗಳ ಬಗ್ಗೆ ತಿಳಿದುಕೊಳ್ಳೋಣ.

ಆಗಸ್ಟ್ ತಿಂಗಳು, ಶ್ರಾವಣ ಮಾಸದಲ್ಲಿ ಹಬ್ಬಗಳ ಸಾಲು ಸಾಲಾಗಿ ಬರುವುದು. ದಿನ ನಿತ್ಯದ ಜಂಜಾಟಗಳಿಗೆ ಒಂದು ಕೊನೆ. ಬಂಧು ಮಿತ್ರರ ಒಡಗೂಡಿ ಆಚರಿಸುವ ಹಬ್ಬಗಳು ಇನ್ನಿಲ್ಲದ ಉತ್ಸಾಹ , ಸಂತೋಷ ಹುಮ್ಮಸ್ಸು ತರುವುದು. ಹಿಂದಿನಂತೆ ಹಬ್ಬ ಎಂದರೆ ಎಣ್ಣೆ ಸ್ನಾನ , ಮನೆ ಶುಚಿಗೊಳಿಸಿ, ಹಸಿರು ಮಾವಿನ ಎಲೆಗಳಿಂದ ತೋರಣ ಕಟ್ಟಿದಲ್ಲಿ ಮನೆ ಮತ್ತು ಮನಸ್ಸಿಗೆ ಒಂದು ವಿಶಿಷ್ಟ ಕಳೆ ನೆಮ್ಮದಿ ಬಂದು ಬಿಟ್ಟಿರುತಿತ್ತು . ಈಗಿನ ದಿನಗಳಲ್ಲಿ ಸಾಂಪ್ರದಾಯಿಕ ಹಬ್ಬದಾಚರಣೆ ಮಾಯವಾಗುತ್ತಿದ್ದರು, ಕೆಲವು ದೊಡ್ಡ ಹಬ್ಬಗಳನ್ನು ಜನರು ಮರೆತಿಲ್ಲ . ತಮ್ಮ ಸಮಯದ ಇತಿ ಮಿತಿಯಲ್ಲಿ ಇಂದಿಗೂ ಎಲ್ಲ ಹಬ್ಬಗಳನ್ನು ತಮ್ಮ ಕೈಲಾದ ರೀತಿಯಲ್ಲಿ ಆಚರಿಸಿಕೊಂಡು ಹೊಗುತ್ತಿದ್ದಾರೆ.

ಮೊದಲಿಗೆ ಶ್ರಾವಣ ಶುರುವಾಗುವುದಕೆ ಒಂದು ದಿನ ಹಿಂದೆ ಬರುವುದೇ ಭೀಮನ ಅಮಾವಾಸ್ಯೆ (ಜ್ಯೋತಿರ್ಭೀಮೇಶ್ವರ ವ್ರತ). ಅಮಾವಾಸ್ಯೆ ಕತ್ತಲ ಪ್ರತೀಕವಾದರೆ, ಈ ಪೂಜಾ ದಿನದಂದು ತಮ್ಮ ದಾಂಪತ್ಯದಲ್ಲಿ ಬೆಳಕು ಸದಾ ಇರಲಿ ಎಂದು ಪಾರ್ವತಿ ಪರಮೇಶ್ವರನನ್ನು ಬೇಡುತ್ತಾ ಸುಮಂಗಲಿಯರು ದೀಪದ ಕಂಬಗಳಿಗೆ ಪೂಜಿಸುವ ಪ್ರತೀಕ ನಮ್ಮ ಸಂಸ್ಕೃತಿಯ ಪ್ರೌಢತೆ ತೋರಿಸುತ್ತದೆ. ನಂತರ ಬರುವುದು ನಾಗರಪಂಚಮಿ, ಹಾವಿನ ಹುತ್ತಕ್ಕೆ ಹಾಲೆರೆದು, ಅಣ್ಣ ತಮ್ಮಂದಿರನ್ನು ಕರೆದು ಆಚರಿಸುವ ಹಬ್ಬ. ಅಂದಿನ ವಿಶೇಷ ಅಡಿಗೆ ಕಾಯಿ ಕಡುಬು ಉದ್ದಿನ ಕಡುಬು ನೆನೆಸಿಕೊಂಡರೆ ಬಾಯಲ್ಲಿ ನೀರೂರುತ್ತದೆ. ಕಷ್ಟವೋ ಸುಖವೋ ಅಮ್ಮಂದಿರುಗಳು ಹಬ್ಬದ ದಿನ ವಿಧ ವಿಧವಾದ ತಿಂಡಿ ತೀರ್ಥಗಳನ್ನು ಮಾಡಿ ದೇವರಿಗೆ ಅರ್ಪಿಸಿ ಕುಟುಂಬದ ಎಲ್ಲರಿಗೂ ಊಟ ಬಡಿಸಿ ತೃಪ್ತಿ ಗೊಳಿಸುತಿದ್ದರು. ಇನ್ನೊಂದು ಹೆಂಗೆಳೆಯರ ಹಬ್ಬ ವರಮಹಾಲಕ್ಷ್ಮಿ. ಲಕ್ಷ್ಮೀ ವ್ರತ ಕೈಗೊಂಡು ಭಕ್ಷ ಭೋಜ್ಯಗಳನ್ನೂ ದೇವರಿಗೆ ಸಮರ್ಪಿಸಿ, ಮುತ್ತೈದೆಯರಿಗೆ ಎಲೆ ಅಡಿಕೆ ಅರಿಶಿನ ಕುಂಕುಮ ಕೊಟ್ಟು ದೇವರ ಕೃಪೆಗೆ ಪಾತ್ರರಾಗುವರು.

ಕೃಷ್ಣನು ಹುಟ್ಟಿದ ದಿನ ಜನ್ಮಾಷ್ಟಮಿ . ಮಂಟಪ ಮಾಡಿ, ಸುತ್ತಲೂ ಕೃಷ್ಣನಿಗೆ ಪ್ರಿಯವಾದ ಹಣ್ಣು ಹಂಪಲು, ಕರಿದ ಖಾದ್ಯಗಳನ್ನು ಇಳಿಬಿಟ್ಟು , ಹೂವು ಮತ್ತು ಎಲೆಗಳಿಂದ ಶೃಂಗಾರ ಮಾಡಿ, ನೆಂಟರೂ ಇಷ್ಟರನ್ನು ಕರೆದು ಕೃಷ್ಣ ಸ್ಮರಣೆ ಮಾಡಿ ಸಿಹಿ ಹಂಚಿ ಸಂತೋಷ ಪಡುವ ದಿನ.
ಸ್ವರ್ಣ ಗೌರಿ ವ್ರತ ಶ್ರದ್ಧೆ ಭಕ್ತಿಗಳಿಂದ ಮಾಡುವ ಇನ್ನೊಂದು ಹಬ್ಬ ಅರಿಶಿನದಲ್ಲಿ ಗೌರಿಯನ್ನು ಮಾಡಿ, ತರ ತರದ ಪತ್ರೆ ಹೂವುಗಳಿಂದ ಅಲಂಕರಿಸಿ, ಸಿಹಿ ತಿಂಡಿ, ಹಣ್ಣುಗಳಿಂದ ದೇವರಿಗೆ ನೈವೇದ್ಯ ಮಾಡಿ, ಹೆಂಗೆಳೆಯರು ಅರಿಶಿನದ ಪವಿತ್ರ ದಾರವನ್ನು ಕೈಗೆ ಕಟ್ಟಿ ಪೂಜಿಸುತ್ತಾರೆ. ಈ ಹಬ್ಬದ ವಿಶೇಷ , ಮೊರದ ಬಾಗಿನ ಕೊಡುವ ಸಂಪ್ರದಾಯ. ಬಾಗಿನದಲ್ಲಿ ಧಾನ್ಯಗಳು, ಬೆಲ್ಲ ಅಕ್ಕಿ, ಹೊಸಬಟ್ಟೆ, ಬಳೆಗಳು ಇಟ್ಟು ಮುತ್ತೈದೆಯರಿಗೆ ಕೊಟ್ಟರೆ ಪುಣ್ಯ ಸಂಪಾದನೆ ಎಂಬ ನಂಬಿಕೆ.

ಇನ್ನೊಂದು ಬಹು ದೊಡ್ಡ ಹಬ್ಬ ವಿನಾಯಕ ಚತುರ್ಥಿ. ಮನೆ ಮನೆಗಳಲ್ಲಿ, ಬೀದಿಯಲ್ಲಿ ಮತ್ತು ಶಾಲೆಯಲ್ಲಿ ಸರ್ವರೂ ಆಚರಿಸುವ ಹಬ್ಬ . ಗಣೇಶನ ಪ್ರತಿಮೆಯನ್ನು ಮಣ್ಣಿನಿಂದ ಮಾಡಿ , ಗಣೇಶನಿಗೆ ಪ್ರಿಯವಾದ ಕಡುಬು ಚಕ್ಲಿಗಳನ್ನು ನೈವೇದ್ಯಕ್ಕೆ ಮಾಡಿ ಪೂಜಿಸುತ್ತಾರೆ. ಹಬ್ಬದ ದಿನ ಚಂದ್ರನ ದರ್ಶನ ನಿಷೇದ, ಒಂದು ವೇಳೆ ನೋಡಿದಲ್ಲಿ ಶಮಂತಕ ಮಣಿಯ ಕತೆಯನ್ನು ಓದಬೇಕು ಎಂಬ ನಂಬಿಕೆ ಕೂಡ ಇದೆ. ಗಣೇಶನ ಹಬ್ಬದ ಇನ್ನೊಂದು ವಿಶೇಷವೆಂದರೆ, ಪೂಜೆಯೆಲ್ಲ ಮುಗಿದ ನಂತರ ಜೈಕಾರದೊಂದಿಗೆ ಪ್ರತಿಮೆಯನ್ನು ನದಿ, ಕೆರೆಯಲ್ಲಿ ವಿಸರ್ಜಿಸುವುದು.

ದಸರಾ ಹಬ್ಬ, ನವರಾತ್ರಿಯಲ್ಲಿ ಸಾಂಪ್ರದಾಯಿಕ ಗೊಂಬೆಗಳನ್ನು ಇಟ್ಟು ಅದಕ್ಕೆ ದೊಡ್ಡವರ ಜೊತೆ ಮಕ್ಕಳೂ ಕೂಡ ಪೂಜೆ ಪುನಸ್ಕಾರ ಸಲ್ಲಿಸುತ್ತಾರೆ. ಸರಸ್ವತಿ, ಲಕ್ಷ್ಮಿ , ಆಯುಧಕ್ಕೆ, ವಾಹನಗಳಿಗೆ ಕೂಡ ಪೂಜೆ ನಡೆಯುತ್ತದೆ. ಅಂಗಡಿಗಳಲ್ಲಿ ಪೂಜೆ ಬಂದವರಿಗೆಲ್ಲ ಸಿಹಿ ಹಂಚಿಕೆ. ಒಂಬತ್ತನೇ ದಿನವೇ ವಿಜಯ ದಶಮಿ . ಪಾಂಡವರು ಕೌರವರನ್ನು ಯುದ್ದದಲ್ಲಿ ಸೋಲಿಸಿ ವಿಜಯದ ಪತಾಕೆ ಹಾರಿಸಿದ ದಿನ. ನಾವು ಏನೇ ಹೊಸದನ್ನು ಅಂದು ಪ್ರಾರಂಭಿಸಿದರೆ ವಿಜಯ ಖಂಡಿತ ಎಂದು ನಂಬಿರುವ ವಿಶೇಷ ಹಬ್ಬ.

ಮತ್ತೊಂದು ದೊಡ್ಡ ಹಬ್ಬ ದೀಪಾವಳಿ. ಬಲಿಚಕ್ರವರ್ತಿಯನ್ನು ಪೂಜಿಸಿ, ಮನೆಗಳಲ್ಲಿ ದೀಪದ ಹಣತೆಗಳಿಂದ ಅಲಂಕರಿಸಿ , ಕತ್ತಲೆಯೆಂಬ ಅಜ್ಞಾನವನ್ನು ಹೊಡೆದೋಡಿಸಿ ಜ್ಞಾನವೆಂಬ ಬೆಳಕು ಮನೆಯೆಲ್ಲ ಪಸರಿಸುವಂತೆ ಮಾಡುವ ಹಬ್ಬ. ವಿಶೇಷವೇನೆಂದರೆ ಈ ಹಬ್ಬದಲ್ಲಿ ಮಕ್ಕಳು ದೊಡ್ಡವರು ಪಟಾಕಿ , ಸುರು ಸುರುಬತ್ತಿ , ಬಾಣ ಬಿರುಸುಗಳನ್ನು, ಸುಡು ಮದ್ದುಗಳನ್ನು ಹಚ್ಚಿ, ಕೇಕೆ ಹಾಕಿ , ಖುಷಿ ಪಟ್ಟು , ಇಡೀ ತಾರಾಮಂಡಲವೇ ಕೆಳಗಿಳಿದಿದೆಯೇನೋ ಎಂಬ ಭ್ರಮೆ ಹುಟ್ಟಿಸುತ್ತಾರೆ.

ಶಿವನ ಆರಾಧನೆಗೆ ಶಿವರಾತ್ರಿ. ರಾತ್ರಿಯೆಲ್ಲ ನಿದ್ದೆ ಮಾಡದೆ ಜಾಗರಣೆ ಮಾಡುತ್ತಾ ಭಜನೆ ಮಾಡುವ ಹಬ್ಬ . ಶ್ರೀರಾಮಚಂದ್ರನನ್ನು ನೆನೆಯುವ ದಿನ ರಾಮನವಮಿ. ಕೋಸಂಬರಿ ಪಾನಕ ಹಂಚಿ ಆಚರಿಸುವ ಹಬ್ಬ.

ಮುಸ್ಲಿಂ ಬಾಂಧವರ ಬಕ್ರೀದ್ ಮತ್ತು ರಮದಾನ್ ಕೂಡ ಎಲ್ಲರೊಡಗೂಡಿ ಆಚರಿಸುವ ಹಬ್ಬ . ವರ್ಷದ ಕೊನೆಗೆ ಬರುವ ಹಬ್ಬ ಕ್ರಿಸ್ಮಸ್ . ಕ್ರೈಸ್ತ ಭಾಂದವರು ಯೇಸು ಕ್ರಿಸ್ತನನ್ನು ನೆನೆದು , ತರಹಾವರಿ ಕೇಕುಗಳು ಬಿಸ್ಕತ್ತುಗಳನ್ನು ಮಾಡಿ ಮಿತ್ರರಿಗೆ ಹಂಚಿ ಸಂತೋಷ ಪಡುವ ದಿನ.

ಒಟ್ಟಿನಲ್ಲಿ ಹಬ್ಬಗಳ ವಿಷಯ ಹೇಳಬೇಕೆಂದರೆ ಚಿಂತೆಗಳನೆಲ್ಲಾ ಮರೆತು, ಸಡಗರ ನೆಮ್ಮದಿ ಸಂತೋಷ ಕಾಣುವ ದಿನ. ಮೂಢ ನಂಬಿಕೆಗಳು ಏನಾದರು ಇರಲಿ ಅದರ ಹಿಂದಿನ ಭಾವಾರ್ಥ ಜನಗಳನ್ನು ಒಗ್ಗೂಡಿಸುವುದು !!!

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ

ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್

ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು

ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ

ಇವರ "ಮಂದಹಾಸ"

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಅ	ನ	ಕಾ
ದ	ರ	ಲ್ಲ
ಹಂ	ವಿ	ಜ

ಏನ್ ರೂಲ್ಸು ?

ಮೇಲಿನ ಒಂಭತ್ತು ಅಕ್ಷರಗಳನ್ನು ಉಪಯೋಗಿಸಿ 2 ರಿಂದ 9 ಅಕ್ಷರಗಳಿರುವ ಪದಗಳನ್ನು ರಚಿಸಿ.

- ಮೂರಕ್ಕಿಂತ ಹೆಚ್ಚಿನ ಅಕ್ಷರ ಇರುವ ಪದಗಳು ಸಂಯುಕ್ತ ಪದಗಳಿರಬಹುದು
- ಮಧ್ಯದ ಅಕ್ಷರ "ರ" ವನ್ನು ಒಳಗೊಂಡ ಕನಿಷ್ಠ 10 ಪದಗಳು ಇರಲೇಬೇಕು.
- ಒಂದು ಅಕ್ಷರವನ್ನು ಒಂದು ಪದದಲ್ಲಿ ಒಂದೇ ಸಲ ಬಳಸಬೇಕು
- 10 ಸಾಧಾರಣ, 15 ಉತ್ತಮ, 20+ ಅತ್ಯುತ್ತಮ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

20 ಕ್ಕೂ ಹೆಚ್ಚು ಪದಗಳನ್ನು ರಚಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಆಗಸ್ಟ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜುಲೈ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ೨೦ಕ್ಕೂ ಹೆಚ್ಚು ಪದಗಳನ್ನ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ರವಿ ತಿರುಮಲೈ, ಬೆಂಗಳೂರು
- ಸ್ಮಿತಾ ಮೇಲ್ಕೋಟೆ, ಸಿಡ್ನಿ
- ನಳಿನಾ ವೆಂಕಟನಾಗ್, ಮೆಲ್ಬೋರ್ನ್
- ಸುಮಾ ಅಶೋಕ್, ಸಿಡ್ನಿ
- ಜಯಶ್ರೀ, ಬೆಂಗಳೂರು

ಜುಲೈ ತಿಂಗಳ ಪದಪುಂಜ

ಸಂ	ದ	ಜ
ವಿ	ಜ	ನ
ರ	ಗ	ಯ

ಮೂಡಬಹುದಾದ ಹಲವು ಪದಗಳು:

ವಿಜಯ, ವಿರಸ, ವಿನಯ, ವಿಜನ, ಜಗ, ಜನ, ಜನಪದ, ಜಪ, ಜಯ ಜರ, ಯಜನ, ನಗ, ನಗರ, ನದ, ನಯ, ನರ, ಗಜ, ಗರ, ಗವಿ, ರಜ ರದ, ರಯ, ರವಿ, ಸಂಗ, ಸಂಗರ, ಸಂದ, ಸಂಪದ, ಪದ, ಪದರ, ಪಯ, ಪರ, ಪರದ, ಪರವಿ, ಪವಿ, ಪಸ, ಪಸದನ, ಪಸರ, ದನ, ದರ, ದರಗ, ದಯ, **ವಿಜಯನಗರ ಸಂಪದ**

Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
NRI SEVA
Contact Mr. Nagendra EMAIL
0401193852

ರಂಗೋಲಿ ಬುಕ್

ರಂಗವಲ್ಲಿ

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ, ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com



ಬಾಣ ಕರ್ನಾಟಕ – ಉತ್ತರ

೧. ಕುವೆಂಪು, ರಾಮಾಯಣ ದರ್ಶನಮ್, ೧೯೬೮ ರಲ್ಲಿ.

೨. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕನ್ನಡದಲ್ಲಿ ೪ ನೆಯ ಜ್ಞಾನಪೀಠ ಪ್ರಶಸ್ತಿ, ೧೯೮೩ ರಲ್ಲಿ

'ಹೆಜ್ಜೆ' ಮತ್ತು 'ಗಾಂಧಿ ಬಂದ' ಪುಸ್ತಕಗಳ ಬಗ್ಗೆ

ಲೇಖನ: ವೀಣಾ ಸುದರ್ಶನ್

ಯಾವುದೇ ದೇಶದ ಕಾಲಘಟ್ಟವನ್ನು ಅರ್ಥಮಾಡಿಕೊಳ್ಳಲು ಇತಿಹಾಸದ ಮಾಹಿತಿಯ ಜೊತೆಗೆ ಅಂದಿನ ಸಾಮಾಜಿಕ ಜೀವನದ ಚಿತ್ರಣ ಕೊಡುವ ಸೃಜನ ಶೀಲ ಸಾಹಿತ್ಯ ಕೂಡ ಅಗತ್ಯವಾಗುತ್ತದೆ. ಹಾಗೆಯೇ ಭಾರತದ ಸ್ವಾತಂತ್ರ ಚಳುವಳಿಯ ಸಂದರ್ಭವು ನಮ್ಮ ಕನ್ನಡ ಸಾಹಿತ್ಯದಲ್ಲಿ ಹೇಗೆ ದಾಖಲಾಗಿದೆ ಎಂದು ನೋಡುವಾಗ ಕಳೆದ ದಶಕದಲ್ಲಿ ಪ್ರಕಟವಾದ ಎರಡು ಕೃತಿಗಳನ್ನು ಹೆಸರಿಸಲೇಬೇಕು. ಒಂದು ವ್ಯಾಸರಾಯ ಬಲ್ಲಾಳರ 'ಹೆಜ್ಜೆ ' ಮತ್ತು ಮತ್ತೊಂದು ಎಚ್ ನಾಗವೇಣಿ ಅವರ 'ಗಾಂಧಿ ಬಂದ" ಕಾದಂಬರಿಗಳು.

ಈ ಎರಡೂ ಕಾದಂಬರಿಗಳಲ್ಲಿ ನಮ್ಮ ರಾಷ್ಟ್ರಪಿತ ಮಹಾತ್ಮಗಾಂಧಿಯವರ ಪ್ರಭಾವ ಮತ್ತು ಗಾಂಧಿತತ್ವವು ದಕ್ಷಿಣಕನ್ನಡದ ಗ್ರಾಮೀಣ ಬದುಕನ್ನು ತಟ್ಟಿದ ರೀತಿಯನ್ನು ತೆರೆದು ಇಡುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಒಟ್ಟಿಗೇ ಬಂದ ಸಾಮಾಜಿಕ ಪರಿವರ್ತನೆಗಳು ಮೂಡಿಸಿದ ಹೆಜ್ಜೆ ಗುರುತುಗಳನ್ನು ಕಾಣಬಹುದು.

ಕೇಂದ್ರ ಹಾಗು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದ ದಿವಂಗತ ವ್ಯಾಸರಾಯ ಬಲ್ಲಾಳರು ಕನ್ನಡದ ಪ್ರಗತಿಪರ ಹಾಗೂ ಚಿಂತನಶೀಲ ಲೇಖಕರಲ್ಲೊಬ್ಬರು.ವರ್ಷ ೨೦೦೦ ರಲ್ಲಿ ಪ್ರಕಟವಾದ ಇವರ "ಹೆಜ್ಜೆ" ಕಾದಂಬರಿಯು ಗಾಂಧೀಜಿಯವರು ದಕ್ಷಿಣ ಭಾರತಕ್ಕೆ ಬಂದ ಮೂವತ್ತರ ದಶಕದಿಂದ ಹಿಡಿದು ಅವರ ಹತ್ಯೆಯಾದ ತನಕದ ಕಾಲವ್ಯಾಪ್ತಿಯಲ್ಲಿದೆ.

ಸಾವಿತ್ರಿ ಮತ್ತವಳ ಗಂಡ ವಿದ್ಯಾಧರ ಕಾದಂಬರಿಯ ಮುಖ್ಯ ಪಾತ್ರಗಳು. ಗಾಂಧಿಯವರ ಸತ್ಯ ಮತ್ತು ಅಹಿಂಸೆಯ ವಿಚಾರಗಳ ಬಗ್ಗೆ ತುಂಬಾ ಗೌರವವಿರುವ ಸಾವಿತ್ರಿ ಗಂಡನ ಮನೆಯಲ್ಲಿ 'ಗಾಂಧಿ ಹುಡುಗಿ' ಅನ್ನುವ ಟೀಕೆಗೆ ಒಳಗಾಗುತ್ತಾಳೆ.ಮದುವೆಯಾಗಿ ಗಂಡನ ಮನೆಗೆ ಬರುವಾಗ ತಂದಿದ್ದ ಗಾಂಧೀಜಿಯವರ ಚರಕ ನೂಲುವ ಚಿತ್ರವೊಂದು ಎಷ್ಟೋ ದಿವಸ ಪೆಟ್ಟಿಗೆಯಲ್ಲೇ ಇರುತ್ತದೆ. ಆಚಾರ, ಧರ್ಮ, ರೀತಿ, ರೀವಾಜು, ಸಂಪ್ರದಾಯಗಳೇ ಶ್ರೇಷ್ಠ ಮಿಕ್ಕೆಲ್ಲವೂ ಕನಿಷ್ಠ ಎನ್ನುವಂತಿದ್ದ ಮನೆಯಲ್ಲಿ ಗಾಂಧೀಜಿಯ ಚಿತ್ರ ಪೆಟ್ಟಿಗೆಯಿಂದ ಹೊರಬಂದದ್ದೇ ದೊಡ್ಡ ಕೋಲಾಹಲಕ್ಕೆ ಕಾರಣವಾಗುತ್ತದೆ. ಸುತ್ತಮುತ್ತಲಿನ ವಿರೋಧದಲ್ಲೂ ಕೆಳಜಾತಿಯವರಿಗೆ ಪಾಠ ಹೇಳಿಕೊಡುತ್ತಾಳೆ. ಚಿಕ್ಕ ವಯಸ್ಸಿನ ಬ್ರಾಹ್ಮಣ ವಿಧವೆಯೊಬ್ಬಳಿಗೆ ಕೇಶಮುಂಡನಕ್ಕೆ ಒಪ್ಪಬೇಡ. ಓದು ಮುಂದುವರೆಸಿ ನಿನ್ನ ಭವಿಷ್ಯ ರೂಪಿಸಿಕೊ ಎಂದು ಪ್ರೇರೇಪಿಸುತ್ತಾಳೆ. ಶೂದ್ರ ಹುಡುಗನೊಬ್ಬನಿಗೆ ಅವಳು ಕೊಡುವ 'ಗಾಂಧೀ ಟೋಪಿ' ಒಂದು ಬದಲಾವಣೆಯ ಸಂಕೇತವಾಗಿ ಕಾಣಿಸಿಕೊಂಡಿದೆ . "ವಸುದೈವ ಕುಟುಂಬಕಂ... ಸರ್ವೇ ಜನಾಃ ಸುಖಿನೋ ಭವಂತು" ಎನ್ನುವುದು ಕೇವಲ ಮೇಲ್ವರ್ಗದವರಿಗೆ ಮಾತ್ರವೇ ಅಥವಾ ಎಲ್ಲರಿಗೂ ಅನ್ವಯವಾಗುತ್ತದೆಯೇ ಎನ್ನುವ ಸಾವಿತ್ರಿಯ ಪ್ರಶ್ನೆ ಅವಳ ಮಾವನವರಿಗೆ ತಮ್ಮ ಸಂಪ್ರದಾಯ ನಡವಳಿಕೆಗಳನ್ನೊಮ್ಮೆ ಪರಾಮರ್ಶಿಸುವಂತೆ ಮಾಡುತ್ತದೆ. ಒಂದು ಪೀಳಿಗೆಗೆ ಗಾಂಧೀ ತತ್ವಗಳು ಕೇವಲ ಹುಚ್ಚು ಅನಿಸಿದರೆ, ಸಾವಿತ್ರಿಗೆ ಅದೊಂದು ತಿಳುವಳಿಕೆಯಾಗುತ್ತದೆ. ಗಾಂಧೀ ತತ್ವ ಮತ್ತು ಆದರ್ಶಗಳು ಅವಳ ಇಡೀ ಬದುಕನ್ನೇ ಆವರಿಸಿಕೊಳ್ಳುತ್ತದೆ.

ಸಾವಿತ್ರಿ ಮತ್ತು ವಿದ್ಯಾಧರರ ಸ್ವಾತಂತ್ರ್ಯ ಹೋರಾಟದ ಸೆಳೆತ ಹಾಗು ಸ್ವರಾಜ್ಯದ ಕನಸು ಕುಟುಂಬದವರೆಲ್ಲರ ವಿರೋಧಕ್ಕೆ ಕಾರಣವಾಗಿ ಹುಟ್ಟಿದೂರು ತೊರೆದು ಮುಂಬೈಗೆ ಬರುತ್ತಾರೆ. ಮುಂದೆ 'ಚಲೇಜಾವ್ ಚಳುವಳಿಯ' ಕಾವು ಸಾವಿತ್ರಿ ವಿದ್ಯಾಧರರನ್ನೂ ತಟ್ಟುತ್ತದೆ. ಕೊನೆಯಲ್ಲಿ ಗಾಂಧೀಜಿಯ ಹತ್ಯೆಯಾಗುವಲ್ಲಿಗೆ ಕಥೆ ಮುಗಿದರೂ ಮುಂದೆ ಸ್ವತಂತ್ರ ಭಾರತದ ಜವಾಬ್ದಾರಿಯ ಬಗ್ಗೆ ಚಿಂತಿಸುವಂತೆ ಮಾಡುತ್ತದೆ .

ನಮ್ಮೆಲ್ಲರ ವೈಯಕ್ತಿಕ, ಕೌಟುಂಬಿಕ ಹಾಗು ಸಾಮಾಜಿಕ ನಡತೆಯಲ್ಲಿ ನೈತಿಕತೆಯ ಎಚ್ಚರ ತರುವ ಶಕ್ತಿಯಾಗಿ ಗಾಂಧಿಯನ್ನು ಬಲ್ಲಾಳರು ತಮ್ಮ 'ಹೆಜ್ಜೆ' ಕಾದಂಬರಿಯಲ್ಲಿ ಸಮರ್ಥವಾಗಿ ತಂದಿದ್ದಾರೆ.

೧೯೯೯ರಲ್ಲಿ ಪ್ರಕಟವಾದ ಎಚ್ ನಾಗವೇಣಿಯವರ "ಗಾಂಧಿ ಬಂದ" ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ತಮ್ಮ 'ನಾಕನೇ ನೀರು" ಕಥಾಸಂಕಲನದೊಂದಿಗೆ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸಿದ ನಾಗವೇಣಿಯವರು ಸದ್ಯಕ್ಕೆ ಹಂಪಿ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸ್ವಾತಂತ್ರಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಗಾಂಧೀಜಿಯವರು ಬಂದ ಸಂದರ್ಭವನ್ನೇ ಹಿನ್ನೆಲೆಯಾಗಿಟ್ಟುಕೊಂಡು ತುಳು ನಾಡಿನ ಬದುಕು ಮತ್ತು ಜಾನಪದ ಸಂಸ್ಕೃತಿಯನ್ನು ಚಿತ್ರಿಸುತ್ತಾ ಹೋಗುವ ಈ ಕಥೆಯುದ್ದಕ್ಕೂ ಉಪ್ಪಿನ ಸತ್ಯಾಗ್ರಹ, ವಿದೇಶಿ ಬಟ್ಟೆಗಳನ್ನು ಸುಟ್ಟಿದ್ದು, ಸ್ವದೇಶಿ ಬಟ್ಟೆಗಳ ಆದ್ಯತೆಯ ಹೋರಾಟದ ವಿವರಣೆಯಿದೆ.

ಜಾತಿ ಪಂಗಡಗಳ ಕಟ್ಟುಪಾಡು, ಸನಾತನ ಧರ್ಮಸಂಹಿತೆಯ ರೀತಿ ರಿವಾಜಿನ ಮುಸುಕಿನಲ್ಲಿ ಕಾಣುವ ಹೆಣ್ಣಿನ ಶೋಷಣೆ, ಶೂದ್ರರ ಮತ್ತು ಕೆಳಜಾತಿಯವರ ಅಸಹಾಯಕತೆ, ಉಳ್ಳವರ ದರ್ಪ ಗತ್ತುಗಳನ್ನು ಹೇಳುತ್ತಲೇ ಮತ್ತೊಂದು ಕಡೆ ಕೋಲ, ಕಂಬಳ, ಆಟ, ಕುಣಿತ, ನೇಮ ಜಾತ್ರೆಗಳ ಸಂಭ್ರಮದ ಗಿಜಿ ಗಿಜಿಯನ್ನೂ ಹೇಳುತ್ತದೆ. ಸಾಂಪ್ರದಾಯಿಕ ಆಚರಣೆ, ನಂಬಿಕೆಗಳು ಜನರ ಬದುಕಿನಲ್ಲಿ ಹೇಗೆ ಸಂಭ್ರಮ, ವೈವಿಧ್ಯತೆಯನ್ನು ತಂದಿದ್ದವೋ ಹಾಗೇ ಜನರನ್ನು ಕಟ್ಟಿ ಹಾಕಿದ್ದವೂ ಕೂಡ.

ಮುಂದಿನ ಪುಟ ನೋಡಿ

ಹೆಜ್ಜೆ ಮತ್ತು ಗಾಂಧೀ ಬಂದ

ಈ ಕಾದಂಬರಿಯ ಮುಖ್ಯ ಪಾತ್ರವಾದ ಪಟೇಲ ಸೀನಪ್ಪಯ್ಯ ಹೆಬ್ಬಾರರ ದರ್ಪಕ್ಕೆ ಮಗಳು ದ್ರೌಪದಿ ಮೌನವಾಗಿಯೇ ಸವಾಲಾಗುತ್ತಾಳೆ. ತೀರ ಎಳೆ ವಯಸ್ಸಿನಲ್ಲೇ ವಿಧವೆಯಾಗಿ ಧರ್ಮಸಂಹಿತೆಯ ರಿವಾಜಿನಂತೆ ತಲೆಕೂದಲು ತೆಗೆಸಿಕೊಂಡು ಎಲ್ಲರಿಂದಲೂ ಅಮಂಗಳ ಎನಿಸಿಕೊಳ್ಳುತ್ತಿದ್ದವಳು ಮುಂದೆ ಮುಸಲ್ಮಾನ ಅದ್ರಾಮನನ್ನು ಮದುವೆಯಾಗುತ್ತಾಳೆ. ದೋಪು ಬ್ಯಾರಿಯಾಗಿ ಹೊಸ ಬದುಕನ್ನು ಕಟ್ಟಿಕೊಳ್ಳುತ್ತಾಳೆ . ಗಾಂಧಿಯ ತತ್ವ ಮತ್ತು ಆದರ್ಶಗಳಿಂದ ಪ್ರಭಾವಿತನಾದ ಅದ್ರಾಮನೊಟ್ಟಿಗೆ ಸ್ವರಾಜ್ಯದ ಚಳುವಳಿಯಲ್ಲಿ ತಾನೂ ಸೇರಿಕೊಳ್ಳುತ್ತಾಳೆ. ಬದುಕಿನ ಅರ್ಥವನ್ನು ಕಂಡುಕೊಳ್ಳುತ್ತಾಳೆ. ಸ್ವತಃ ಚರಕದಿಂದ ನೂಲು ತೆಗೆದು ಅದರಿಂದಲೇ ಮಾಡಿದ ಖಾದಿ ಬಟ್ಟೆಯನ್ನು ತೊಡುವುದೂ ಸಹ ಹೋರಾಟದ ಇನ್ನೊಂದು ಮಗ್ಗುಲಾಗುತ್ತದೆ. ಖಾದಿಯು ಸ್ವಾತಂತ್ರ್ಯದ ಎಳೆಯಾಗಿ ಕಥೆಯುದ್ದಕ್ಕೂ ಹರಡಿಕೊಂಡಿದೆ.

ಸ್ವರಾಜ್ಯದ ಅರಿವು ಮೂಡಿಸಲು ದೇಶದ ಮೂಲೆ ಮೂಲೆಗೂ ಸುತ್ತಾಡುತ್ತಿದ್ದ ಗಾಂಧಿ ದಕ್ಷಿಣ ಕನ್ನಡ ಜಿಲ್ಲೆಗೆ ಮೂರು ಬಾರಿ ಬಂದಿದ್ದರಂತೆ. ಕಾರ್ನಾಡ ಸದಾಶಿವರಾಯರ ಜೊತೆ ಗಾಂಧೀಜಿ ಸಹ ಮಂಗಳೂರಿಗೆ ಬರುತ್ತಾರೆಂದು ತಿಳಿದಾಗ, ಶೂದ್ರರ ಮಕ್ಕಳಿಗೆ ಒಂದು ಸಂಧಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಎಷ್ಟೋ ದಿನದಿಂದ ಹಂಬಲಿಸುತ್ತಿದ್ದ ಗಾಂಧಿಯವರ ಭಾಷಣ ಕೇಳಲು ಹೋಗುವುದೋ ಅಥವಾ ಸಂಪ್ರದಾಯದ ಆಚರಣೆಯಂತೆ ಜುಮಾದಿ ದೈವದ ಕಂಬಳಕ್ಕೆ ಹೋಗುವುದೋ ಎಂದು. ಕೊನೆಗೆ ಗಾಂಧಿಯವರನ್ನು ನೋಡಲು ಹೋಗುವುದೇ ಮುಖ್ಯವಾಗುತ್ತದೆ.

ಗಾಂಧೀ ತತ್ವ ಮತ್ತು ನಂಬಿಕೆಗಳು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವ ಒಂದು ಸಾಧನವಾಗುವುದರ ಜೊತೆಗೆ ನಿಧಾನವಾಗಿ ಸಾಮಾನ್ಯ ಜನರ ಬದುಕನ್ನೂ ಆವರಿಸಿ, ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತದೆ.

ಈ ಎರಡೂ ಕಾದಂಬರಿಗಳಲ್ಲಿ ಬರುವ ಸ್ವಾತಂತ್ರ್ಯ ಪೂರ್ವ ಭಾರತದ ಮಹಿಳೆಯು ತಳೆದ ನಿಲುವು ಮತ್ತು ಇಟ್ಟ ಹೆಜ್ಜೆಗಳು ಅವಾಸ್ತವ ಅನಿಸಿದರೂ ಅದು ಸಾಹಿತಿಯ ವರ್ತಮಾನದ ಆಶಯವೆನ್ನುವುದು ಗಮನಿಸಬೇಕಾದ ಅಂಶ.

ಬಲ್ಲಾಳರ 'ಹೆಜ್ಜೆ'ಯನ್ನು ಐದು ಭಾಷೆಗಳಲ್ಲಿ ಸಿನಿಮಾ ಮಾಡುತ್ತಾರೆಂಬ ಸುದ್ದಿ ಇದೆ. ಇತ್ತೀಚೆಗಷ್ಟೇ ಬೆಂಗಳೂರಿನ ನನ್ನ ಗೆಳತಿ ಚಂಪಾ ಶೆಟ್ಟಿ ಎಂಬುವರು 'ಗಾಂಧೀ ಬಂದ' ಕಾದಂಬರಿಯ ಯಶಸ್ವಿ ನಾಟಕ ಪ್ರಯೋಗನ್ನು ಸಹ ಮಾಡಿದ್ದಾರೆ. ನನಗೀಗ ಇದರ ರಂಗರೂಪ ಹೇಗಿರಬಹುದೆಂಬ ಕುತೂಹಲ ಕಾಡುತ್ತಾ ಇದೆ. ▪

ಕ ನ್ನ ಡ

ಪ್ರಾಚೀನ ಕನ್ನಡ ಸಾಹಿತ್ಯ

ಲೇಖಕರು: ಹರೀಶ್ . ಜಿ

ತನು ಕನ್ನಡ ಮನ ಕನ್ನಡ

- ಕನ್ನಡವು ಸಂಸ್ಕೃತ-ಹಿಂದಿ-ಮರಾಠಿ-ಗುಜರಾತಿಗಳ ಆರ್ಯ ಭಾಷಾವರ್ಗಕ್ಕಿಂತ ಭಿನ್ನವಾದ ದ್ರಾವಿಡ ಭಾಷಾವಂಶಕ್ಕೆ ಸೇರಿದೆ.
- ತನ್ನದೇ ಆದ ವೈಶಿಷ್ಟ್ಯಗಳಿದ್ದರೂ ಕನ್ನಡ ಭಾಷೆಯು ಎಲ್ಲ ಭಾಷೆಗಳಿಂದ ತನಗೆ ಅಗತ್ಯವಾದ ಪದಗಳನ್ನು ಸ್ವೀಕರಿಸುತ್ತ ಬೆಳೆದಿದೆ.
- ಸಂಸ್ಕೃತದಿಂದ ಯಥೇಚ್ಛವಾಗಿ ಪದಗಳನ್ನು ಸ್ವೀಕರಿಸಿದರೂ ಅದು ಬಂದು ಕನ್ನಡದ ದೇಸಿ ಪದಗಳನ್ನು ಹಿಂದಕ್ಕೆ ಹಾಕಲಿಲ್ಲ.
- ಸಂಸ್ಕೃತ ಪದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡೇ ಬಳಕೆಯಾಗಿವೆ. ಅಲ್ಲಿಂದಲೂ ಪ್ರಾಕೃತದಿಂದಲೂ ಬಂದ ತದ್ಭವಗಳಂತೂ ಕನ್ನಡ ದೇಶ್ಯ ಪದಗಳೇ ಎನ್ನುವಷ್ಟು ಕನ್ನಡ ನುಡಿಯೊಡನೆ ಸಮರಸವಾಗಿ ಬೆರತವು.
- ಕನ್ನಡ ಸಾಹಿತ್ಯವೂ ಅಷ್ಟೇ; ಮಡಿವಂತಿಕೆಯನ್ನು ಇಟ್ಟುಕೊಳ್ಳದೆ, ಉಳಿದ ಸಾಹಿತ್ಯಗಳ ಪ್ರಭಾವಕ್ಕೆ ತಾನು ಸಂಪೂರ್ಣವಾಗಿ ಶರಣಾಗದೆ, ಎಲ್ಲ ಸಾಹಿತ್ಯಗಳಿಂದ ಪ್ರೇರಣೆ ಪ್ರಚೋದನೆಗಳನ್ನು ಸ್ವಾಗತಿಸಿ ಸ್ವತಂತ್ರ ಸಾಹಿತ್ಯವನ್ನು ಕನ್ನಡವು ಬೆಳೆಸಿಕೊಂಡಿತು.
- ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ ಈ ಯಾವ ಪ್ರಕಾರಗಳನ್ನು ತೆಗೆದುಕೊಂಡರು ಕನ್ನಡವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ.
- ಪಂಪ, ರನ್ನ, ಕುಮಾರವ್ಯಾಸರು ಮಹಾಭಾರತದ ವಸ್ತುವನ್ನು ಆರಿಸಿಕೊಂಡಿದ್ದರೂ ಅವು ಕನ್ನಡದ ನೆಲಕ್ಕೆ ಹೊಂದಿಕೊಂಡಿವೆ. ಹಲವು ಶತಮಾನಗಳಷ್ಟು ಹಿಂದಿನದಾದರೂ ನಮ್ಮ ಸಮಕಾಲೀನ ಕ್ಷೇತ್ರದ ವಾತಾವರಣವನ್ನು ಅಲ್ಲಿ ಮೂಡಿಸಿದ್ದಾರೆ.
- ವಚನ ಸಾಹಿತ್ಯವಂತೂ ಕನ್ನಡದ್ದೇ ಎಂಬಷ್ಟು ಸ್ವಂತಿಕೆಯನ್ನು ಹೊಂದಿರುವ ಸಾಹಿತ್ಯವಾಗಿದ್ದು ಅದು ವಿಶ್ವಸಾಹಿತ್ಯಕ್ಕೆ ಕನ್ನಡವು ಕೊಟ್ಟ ಅತ್ಯಂತ ಮಹತ್ವದ ಕಾಣಿಕೆಯಾಗಿದೆ. ಸ್ವಂತ ಅನುಭವ, ಸಾಮಾಜಿಕ ಕಳಕಳಿಗಳ ದೃಷ್ಟಿಯಿಂದ ವಚನಸಾಹಿತ್ಯದ ಜೊತೆ ಹೋಲಿಸಲು ಭಾರತದಲ್ಲಿ ಮತ್ತೊಂದು ಉದಾಹರಣೆ ನಿಶ್ಚಿತವಾಗಿಯೂ ದೊರಕುವುದಿಲ್ಲ. ಕನ್ನಡ ಶಾಸನಗಳ ಸಾಹಿತ್ಯ ಶೈಲಿ ಇಡೀ ಭಾರತದಲ್ಲಿ ಮತ್ತೊಂದೆಡೆ ಕಾಣಸಿಗದು
- ಈ ಎಲ್ಲ ಬಿಡಿಲಕ್ಷಣಗಳನ್ನು ಒಟ್ಟಿಗೆ ಸೇರಿಸಿ ನೋಡಿದಾಗ ಕರ್ನಾಟಕ ಸಂಸ್ಕೃತಿಯ ಭಾಗವಾಗಿ ಬಂದಿರುವ ಜನರಲ್ಲಿ ಸಹೃದಯತೆ, ಸನ್ನಡತೆಗಳು ಎರಡನೆಯ ಸ್ವಭಾವವಾಗಿ ಸೇರಿಹೋಗಿವೆ. ಇತರ ಜನರ ಮತ್ತು ಭಾಷಾ ಸಾಹಿತ್ಯಗಳ ಪ್ರಭಾವಕ್ಕೆ ಒಳಗಾಗಿಯೂ ಕರ್ನಾಟಕ ಸಂಸ್ಕೃತಿಯು ತನ್ನ ವ್ಯಕ್ತಿತ್ವವನ್ನು ಬಿಟ್ಟುಕೊಟ್ಟಿಲ್ಲ

ವಿಜ್ಞಾನ ತತ್ವ

ಬಿಸಿ ನೀರಲ್ಲಿ ಏಕೆ ಪದಾರ್ಥವು ಬೇಗ ಕರಗುತ್ತದೆ ?

ಬದರಿ ತ್ಯಾಮಗೊಂಡ್ಲು

ಬಿಸಿನೀರಿನಲ್ಲಿ ಸಕ್ಕರೆ ಅಥವಾ ಇನ್ಯಾವುದೇ ಕರಗುವ ವಸ್ತು ಹಾಕಿದಾಗ ತಣ್ಣೀರ್ಗಿಂತ ಬೇಗ ಕರಗುತ್ತದೆ. ಏಕೆ ಎಂದು ಈ ಸರಳ ಪ್ರಯೋಗದ ಮೂಲಕ ತಿಳಿದು ಅದರ ಹಿಂದಿರುವ ವಿಜ್ಞಾನವನ್ನು ಅರಿಯೋಣ.

ಏನು ಬೇಕು:

ಬಿಸಿ ನೀರು ತುಂಬಿದ ಒಂದು ಸ್ಪಷ್ಟ ಗಾಜಿನ ಲೋಟ, ತಣ್ಣೀರು ತುಂಬಿದ ಒಂದು ಸ್ಪಷ್ಟ ಗಾಜಿನ ಲೋಟ, ಆಹಾರ ಬಣ್ಣ (Food Colour), ಒಂದು ಕಣ್ಣಿನ ಡ್ರಾಪರ್ (Eye Dropper)

ಸೂಚನೆ: ಈ ಪ್ರಯೋಗವನ್ನು ಅಡುಗೆಮನೆ ಸಿಂಕ್ ಬಳಿ ಅಥವಾ ಮನೆ ಹೊರಗೆ ಮಾಡಿ



ವಿಧಾನ:

ಸಾಧ್ಯವಿದ್ದಷ್ಟು ಮಟ್ಟಿಗೆ ಒಮ್ಮೆಗೆ ಎರಡೂ ಗಾಜಿನ ಲೋಟಕ್ಕೆ ಆಹಾರ ಬಣ್ಣದ ಒಂದು ತೊಟ್ಟನ್ನು ಡ್ರಾಪರ್ ಮೂಲಕ ಹಾಕಿ ನೀರಿನಲ್ಲಿ ಅದು ಹರಡುವುದನ್ನು ಗಮನಿಸಿ.

ರಹಸ್ಯ ಏನು

ಲೋಟವನ್ನು ಸಮೀಪದಿಂದ ವೀಕ್ಷಿಸಿದಾಗ, ಬಿಸಿನೀರಿನಲ್ಲಿ ಬಣ್ಣದ ಕಣ ಕಣಗಳು ತಣ್ಣೀರಿಗಿಂತ ವೇಗವಾಗಿ ಚಲಿಸುತ್ತಿರುತ್ತವೆ. ನೀರಿನ ತಾಪಮಾನ ಹೆಚ್ಚಾದಂತೆ ಹಾಕಿದ ಪದಾರ್ಥದ ಅಣುಗಳ ಚಲನಾ ಶಕ್ತಿ (Kinetic Energy) ಹೆಚ್ಚುತ್ತದೆ. ಹೀಗೆ ವೇಗವಾಗಿ ಚಲಿಸುವ ಅಣುಗಳು ಒಂದಕ್ಕೊಂದು ಡಿಕ್ಕಿ ಹೊಡೆದು ಬೇಗನೆ ಕರಗುತ್ತದೆ.

ಪದಾರ್ಥವು ಬೇಗನೆ ಕರಗಲು ಬಿಸಿ ಏಕೆ ಸೂಕ್ತ ಎಂದು ತಿಳಿದು ಕೊಂಡಿರಲ್ಲವೇ! ಮುಂದಿನ ಸರತಿ ಅಡುಗೆ ಮಾಡುವಾಗ ವಿಜ್ಞಾನ ಹೇಗೆ ಕೆಲಸ ಮಾಡುತ್ತಿದೆ ಎಂದು ಕುತೂಹಲದಿಂದ ನೋಡುತ್ತೀರಲ್ಲವೇ !

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

India Australia Friendship Fair 2013
25 Aug 2013 - 00:00

Edwina Flack Avenue, Homebush

Start Time: 12:00 AM | End Time: 12:00 AM

India Australia Friendship Fair 2013 is being held in Olympic Park, Athletic Centre on 25th August 2013

Friends of India organising **ಗಣೇಶೋತ್ಸವ**

Whitlam leisure centre,
90a Memorial Ave, Liverpool NSW 2170

Sept 14 & 15th September
14th Morning 8 AM Ganesha Pooje,
Cultural Function - Evening 5 pm onwards followed by Dinner

15th Sathyanarayana Pooje & Visarjana

Spark Divine Perth (Inc) organising

Vishwa Mangala Homa
Guidance of Rev. Chandrashekhar Udupa, DivinePark India

22-Sep-2013 Sunday 5:00AM - 8:00AM

Bala Murugan Temple Premises
12 Mandogalup Rd, Mandogalup, PERTH.

Mantra chanting - Offer Ahuthi - Prasadam - FREE ENTRY

Contacts: Shrikant -0423861065, Prasanna -0401171637

ರಾಘವೇಂದ್ರ ಸ್ವಾಮಿಗಳ ಆರಾಧನೆ

25th August 2013 (9 AM – 1PM)

Venue: SRI Mandir
286, Cumberland Road, Auburn

Pooja starts with sankalpa and concludes with Maha Prasada

Contacts:
Sridhar and Nanda Kumsy – 96728485
Jagannath & Lakshmi Rao – 98961670

ತಲ್ಲಣ – ಚಲನಚಿತ್ರ

ತಾರಾಗಣ: ಕೆ.ಎಸ್.ಶ್ರೀಧರ್, ನಿರ್ಮಲಾ, ನಾಗೇಂದ್ರ ಶಾ
ಚಿತ್ರಕತೆ, ನಿರ್ದೇಶನ: ಸುದರ್ಶನ್. ಎನ್.
ಸ್ಥಳ : Hurstville Civic Theatre, Hurstville
ಭಾನುವಾರ Sept 22nd, 3 ಗಂಟೆಗೆ & 6 ಗಂಟೆಗೆ (2 shows)
ಪ್ರವೇಶ: $15 (ಮಕ್ಕಳು ಹಾಗು ಇತರರಿಗೆ: $12)

ಟಿಕೆಟ್‌ಗಳಿಗೆ ಸಂಪರ್ಕಿಸಿ:

ವೀಣಾ ಸುದರ್ಶನ್ : 0410 432 528
ಸ್ಮಿತಾ ಮೇಲ್ಕೋಟೆ : 0488295837
ನಾರಾಯಣ : 0423 634 979
ಸುದರ್ಶನ್ : 0414 992 528

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.